# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಮಾರ್ಚ್ 03, 2022

ಸಂಪುಟ : 48 ಸಂಚಿಕೆ : 292 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com




## ಕುರುವತ್ತಿಯಲ್ಲಿ ವಿಜೃಂಭಣೆಯ ರಥೋತ್ಸವ

ಹೂವಿನಹಡಗಲಿ, ಮಾ.2- ತಾಲ್ಲೂಕಿನ ಐತಿಹಾಸಿಕ ಕುರುವತ್ತಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಶ್ರೀ ಬಸವೇಶ್ವರ ಸ್ವಾಮಿಯ ರಥೋತ್ಸವ ಭಕ್ತ ಸಾಗರದ ನಡುವೆ ಬುಧವಾರ ಸಂಜೆ ವಿಜೃಂಭಣೆಯಿಂದ ಜರುಗಿತು

ದಾವಣಗೆರೆ, ಹಾವೇರಿ, ಹುಬ್ಬಳ್ಳಿ, ಗದಗ ಮೊದಲಾದೆಡೆಯಿಂದ ಆಗಮಿಸಿದ್ದ ಭಕ್ತರು, ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು. ಮಧ್ಯಾಹ್ನದ ವೇಳೆಗೆ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ವಾಹನಗಳು ಕುರುವತ್ತಿ ಗ್ರಾಮ ಪ್ರವೇಶಿಸದಂತೆ ಪೋಲಿಸರು ಬಂದೋಬಸ್ತ್ ಏರ್ಪಡಿಸಿದ್ದರು. ಇದರಿಂದಾಗಿ ಬಹುತೇಕ ಭಕ್ತರು 2 ಕಿಲೋ ಮೀಟರ್ ದೂರದಿಂದಲೇ ಪಾದಯಾತ್ರೆ ಮೂಲಕ ಆಗಮಿಸಿದರು.

ಕುರುವತ್ತಿ ಗ್ರಾಮದಲ್ಲಿ ಯಾವುದೇ ವ್ಯಾಪಾರ ಚಟುವಟಿಕೆಗಳಿಗೆ ಅವಕಾಶವಿರಲಿಲ್ಲ. ಕುರುವತ್ತಿ ಗ್ರಾಮ ಪ್ರವೇಶಿಸಲು ಮೈಲಾರದಿಂದ ಏಕಮುಖ ರಸ್ತೆ ಮಾತ್ರ ಇರುವುದರಿಂದ ಪ್ರತಿ ವರ್ಷ ವಾಹನಗಳ ದಟ್ಟಣೆಯಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗುತ್ತಿತ್ತು. ಆದರೆ ಈ ಬಾರಿ ವಾಹನಗಳ ದಟ್ಟಣೆ ಇಲ್ಲದೆ ಪ್ರತಿಯೊಬ್ಬರಿಗೂ ತೇರು ಕಾಣುವಂತಾಗಿತ್ತು.

ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಸಹಾಯಕ ಆಯುಕ್ತ ಎಂ.ಎಚ್. ಪ್ರಕಾಶರಾವ್, ಗ್ರಾಮ ಪಂಚಾಯ್ತಿ ಅಧ್ಯಕ್ಷೆ ಸುವರ್ಣಮ್ಮ, ಉಪಾಧ್ಯಕ್ಷೆ ದೇವಕ್ಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಗುತ್ತೆಪ್ಪ ತಳವಾರ ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿ ಪಾಲ್ಗೊಂಡಿದ್ದರು.

ತುಂಗಭದ್ರಾ ನದಿಯಲ್ಲಿ ಸ್ನಾನ ಮಾಡಲು, ಎತ್ತುಗಳು ಮತ್ತು ವಾಹನಗಳನ್ನು ತೊಳೆಯಲು ಅವಕಾಶ ನೀಡಿರಲಿಲ್ಲ. ಕೋವಿಡ್ ಹಿನ್ನೆಲೆಯಲ್ಲಿ ನಿರ್ಬಂಧ ವಿಧಿಸಿದ್ದ ಜಿಲ್ಲಾಡಳಿತ ಕೊನೇ ಗಳಿಗೆಯಲ್ಲಿ ರಥೋತ್ಸವಕ್ಕೆ ರಿಯಾಯಿತಿ ತೋರಿದ್ದರಿಂದ ಭಕ್ತ ಸಾಗರವೇ ಜಮಾವಣೆಯಾಗಿತ್ತು.

## ಹರಪನಹಳ್ಳಿ ತಾ.ನ ನಾಲ್ವರಲ್ಲಿ ಮೂವರು ತಾಯ್ನಾಡಿಗೆ ಪ್ರಯಾಣ

ಹರಪನಹಳ್ಳಿ, ಮಾ.2- ರಷ್ಯಾ ದಾಳಿಯಿಂದ ಯುದ್ಧ ಭೂಮಿಯಾಗಿರುವ ಯುಕ್ರೇನ್‌ನಲ್ಲಿ ಸಂಕಷ್ಟದಲ್ಲಿರುವ ಹರಪನಹಳ್ಳಿ ತಾಲ್ಲೂಕಿನ ನಾಲ್ಕು ಜನರಲ್ಲಿ ಮೂವರು ತಾಯ್ನಾಡಿಗೆ ಬರಲು ಪ್ರಯಾಣದಲ್ಲಿದ್ದಾರೆ.

ಆದರೆ, ಗಗನ್‌ದೀಪ ಮಾತ್ರ ಇನ್ನೂ ಖಾರ್ಕಿವ್ ಬಂಕರ್‌ನಲ್ಲಿಯೇ ಇದ್ದಾನೆ ಎಂದು ಅವರ ತಾಯಿಗೆ ಮಾಹಿತಿ ನೀಡಿದ್ದಾನೆ.

ಲಾವಣ್ಯ, ವಿಕಾಸ್ ಪಾಟೀಲ್, ಸಂಜಯ ಅವರು ಸ್ವದೇಶಕ್ಕೆ ಬರಲು ವಿಮಾನ ನಿಲ್ದಾಣಕ್ಕೆ ತಲುಪಲು ಯುಕ್ರೇನ್‌ನಲ್ಲಿ ಬಸ್ಸು, ರೈಲಿನಲ್ಲಿ ಪ್ರಯಾಣದಲ್ಲಿದ್ದಾರೆ.

ಲಾವಣ್ಯ ಮಂಗಳವಾರ ಮಧ್ಯಾಹ್ನ 2 ಗಂಟೆಗೆ ಅವರ ತಂದೆ ಬಿ.ಎಚ್.ಎಂ ಜಯಕುಮಾರ್ ಅವರ ಬಳಿ ಮಾತನಾಡಿ, ನಾನು ಸೇಫ್ ಆಗಿದ್ದೇನೆ. ಈಗ ರೋಮೇನಿಯಾದಲ್ಲಿದ್ದು, ವಿಮಾನ ನಿಲ್ದಾಣಕ್ಕೆ ಹೊರಟಿದ್ದೇನೆ ಎಂದು ಹೇಳಿದ್ದಾಳೆ.

ವಿಕಾಸ್ ಪಾಟೀಲ್ ನಾನು ಜಾಪ್ರೋಜಿಯ ರೈಲು ನಿಲ್ದಾಣದಲ್ಲಿದ್ದು, ಸ್ಲೋವೇಕಿಯಾ ಬಾರ್ಡರ್ ಕಡೆ ಹೊರಟಿದ್ದೇನೆ, ಅಲ್ಲಿಂದ ವಿಮಾನ ವ್ಯವಸ್ಥೆ ಇದೆ, ನನ್ನ (2ನೇ ಪುಟಕ್ಕೆ)

# ನಡೆದುಕೊಂಡಾದರೂ ಖಾರ್ಕೀವ್ ತೊರೆಯಿರಿ

**ಸಂಘರ್ಷ ತೀವ್ರಗೊಂಡ ನಂತರ ಭಾರತೀಯರಿಗೆ ರಾಯಭಾರಿ ಕಚೇರಿ ತುರ್ತು ಸೂಚನೆ**

**ಭಾರತೀಯರು ವಾಪಸ್ ಬರಲು ಮಾನವೀಯ ಕಾರಿಡಾರ್ ಕಲ್ಪಿಸಲು ರಷ್ಯಾ ಭರವಸೆ**

ನವದೆಹಲಿ, ಮಾ. 2 – ಉಕ್ರೇನ್‌ನಲ್ಲಿ ಸಂಘರ್ಷದ ಕೇಂದ್ರವಾಗುತ್ತಿರುವ ಖಾರ್ಕೀವ್‌ನಲ್ಲಿರುವ ಭಾರತೀಯ ನಾಗರಿಕರು ತ್ವರಿತವಾಗಿ ನಗರ ತೊರೆಯುವಂತೆ ರಾಯಭಾರಿ ಕಚೇರಿ ಸೂಚನೆ ನೀಡಿದೆ. ರೈಲು ಪ್ರಯಾಣ ಸಾಧ್ಯವಾಗದೇ ಹೋದರೆ ನಡೆದುಕೊಂಡಾದರೂ ಹತ್ತಿರದ ಮೂರು ನಗರಗಳನ್ನು ಸೇರುವಂತೆ ತುರ್ತು ಸೂಚನೆ ನೀಡಲಾಗಿದೆ.

ಈ ನಡುವೆ ಹೇಳಿಕೆ ನೀಡಿರುವ ರಷ್ಯಾ, ಭಾರತದ ನಾಗರಿಕರು ಹೊರಗೆ ತೆರಳಲು ಮಾನವೀಯ ಕಾರಿಡಾರ್ ಒದಗಿಸುವುದಾಗಿ ಭರವಸೆ ನೀಡಿದೆ.

ಈ ನಡುವೆ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬುಧವಾರ ರಾತ್ರಿ ಉಕ್ರೇನ್ ಪರಿಸ್ಥಿತಿ ಕುರಿತು ಮತ್ತೊಂದು ಸಭೆ ನಡೆಸಿದ್ದಾರೆ. ಭಾರತೀಯರನ್ನು ವಾಪಸ್ ತರುವ ವ್ಯವಸ್ಥೆಗೆ ನೆರವಾಗಲು ನಾಲ್ವರು ಸಚಿವರು ಈಗಾಗಲೇ ಉಕ್ರೇನ್ ನೆರೆಯ ದೇಶಗಳಿಗೆ ತಲುಪಿದ್ದಾರೆ.

ತುರ್ತು ಸಲಹೆ ನೀಡಿದ್ದ ಉಕ್ರೇನ್‌ನಲ್ಲಿರುವ ಭಾರತದ ರಾಯಭಾರಿ ಕಚೇರಿ, ಭಾರತೀಯರು ಖಾರ್ಕೀವ್ ಅನ್ನು ಸಂಜೆ 6 ಗಂಟೆಯ (ಭಾರತದ ಕಾಲಮಾನ ರಾತ್ರಿ 9.30) ಒಳಗೆ ತೊರೆಯುವಂತೆ ತಿಳಿಸಿತ್ತು. ಸಮೀಪದ ಪೆಸೊಚಿನ್, ಬಬೈ ಇಲ್ಲವೇ ಬೈಜ್ಲುಯುಡಿವ್ಕ ನಗರಗಳಿಗೆ ತೆರಳಲು ತಿಳಿಸಲಾಗಿತ್ತು. ಈ ನಗರಗಳು 11 ರಿಂದ 16 ಕಿ.ಮೀ. ದೂರದಲ್ಲಿವೆ.

ಉಕ್ರೇನ್ ನಗರಗಳ ಮೇಲೆ ದಾಳಿ ನಡೆಸಲು ರಷ್ಯಾ ತೀವ್ರ ಸಿದ್ಧತೆ ನಡೆಸುತ್ತಿರುವ ಮಧ್ಯೆ ಈ ಬೆಳವಣಿಗೆಯಾಗಿದೆ.

ಮಾಧ್ಯಮಗಳಿಗೆ ಮಾಹಿತಿ ನೀಡಿರುವ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, ರಷ್ಯಾದಿಂದ ದೊರೆತ ಮಾಹಿತಿಯನ್ನು ಆಧರಿಸಿ ಖಾರ್ಕೀವ್ ಅನ್ನು ತಕ್ಷಣವೇ ತೊರೆಯುವಂತೆ ಸೂಚನೆ ನೀಡಲಾಗಿದೆ. ವಾಹನ ಇಲ್ಲವೇ ಬಸ್ ಇಲ್ಲವೇ ರೈಲ್ವೆ ಸಂಪರ್ಕ ಸಿಗದವರು ನಡೆದುಕೊಂಡಾದರೂ ಹತ್ತಿರದ ಮೂರು ನಗರಗಳಿಗೆ ತಲುಪಬೇಕು ಎಂದು ತಿಳಿಸಲಾಗಿದೆ ಎಂದಿದ್ದಾರೆ.

ಯಾವುದೇ ಸಂದರ್ಭದಲ್ಲಿ ಭಾರತದ ನಾಗರಿಕರು ಈ ನಗರಗಳಲ್ಲಿರುವ ನೆಲೆಗಳಿಗೆ ಸ್ಥಳೀಯ ಕಾಲಮಾನದ ಪ್ರಕಾರ ಸಂಜೆ 6 ಗಂಟೆಗೆ ತಲುಪುವಂತೆ ತಿಳಿಸಲಾಗಿದೆ ಎಂದವರು ಹೇಳಿದ್ದಾರೆ.

ಖಾರ್ಕೀವ್ ನಗರದ ಮೇಲೆ ದಾಳಿ ತೀವ್ರವಾಗಬಹುದು. ಎಲ್ಲಾ ಭಾರತೀಯರು ನಗರ ತೊರೆಯಬೇಕು ಎಂದು ಭಾರತಕ್ಕೆ ರಷ್ಯಾ ಮಾಹಿತಿ ನೀಡಿದೆ ಎನ್ನಲಾಗಿದೆ.

ಭಾರತೀಯರನ್ನು ತೆರವುಗೊಳಿಸಲು ಉಕ್ರೇನ್ ಪೂರ್ವಭಾಗ ಬಳಸಲು ಪ್ರಯತ್ನ ನಡೆಸಲಾಗುತ್ತಿದೆ. ಆದರೆ, ಆ ಮಾರ್ಗ ಬಳಸುವುದು ಸುಲಭವಲ್ಲ ಎಂದು ಬಾಗ್ಚಿ ತಿಳಿಸಿದ್ದಾರೆ.

ಪ್ರತ್ಯೇಕ ಹೇಳಿಕೆ ನೀಡಿರುವ ರಷ್ಯಾದ ರಾಯಭಾರಿ ಡೆನಿ ಅಲಿಪೊವ್, ಖಾರ್ಕೀವ್, ಸುಮ್ಯೆ ಹಾಗೂ ಇತರೆ ಸಂಘರ್ಷ ಪೀಡಿತ ಪ್ರದೇಶಗಳಲ್ಲಿರುವ ಭಾರತೀಯರು ರಷ್ಯಾಗೆ ತಲುಪಲು ಮಾನವೀಯ ಕಾರಿಡಾರ್ ಒದಗಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿರುವುದಾಗಿ ಹೇಳಿದ್ದಾರೆ.

ಖಾರ್ಕೀವ್, ಸುಮ್ಯೆ ಹಾಗೂ ಇತರೆ (3ನೇ ಪುಟಕ್ಕೆ)

# ಮೇಕೆದಾಟು ಯೋಜನೆಗೆ ಬಜೆಟ್‌ನಲ್ಲಿ ಹಣ

## ಕಾಂಗ್ರೆಸ್ ಪಾದಯಾತ್ರೆ ನಡುವೆಯೇ ನೀರಾವರಿಗೆ ಹೆಚ್ಚು ಹಣ ಮೀಸಲಿರಿಸಲು ನಿರ್ಧಾರ



ಬೆಂಗಳೂರು, ಮಾ. 2 - ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಒತ್ತಾಯಿಸಿ ಕಾಂಗ್ರೆಸ್ ಪಾದಯಾತ್ರೆ ನಡೆಸಿರುವ ಮಧ್ಯೆಯೇ, ರಾಜ್ಯದ ನೀರಾವರಿ ಯೋಜನೆಗಳಿಗೆ ದೊಡ್ಡ ಪ್ರಮಾಣದಲ್ಲಿ ಬಜೆಟ್‌ನಲ್ಲಿ ಹಣ ಮೀಸಲಿರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಕೃಷ್ಣರಾಜ ಸಾಗರ ಅಣೆಕಟ್ಟೆಗೆ ಸಮನಾಂತರ ಜಲಾಶಯ ನಿರ್ಮಾಣ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಚೊಚ್ಚಲ ಮುಂಗಡ ಪತ್ರದಲ್ಲಿ ಒಂದಷ್ಟು ಹಣ ಮೀಸಲಿಡಲಿದ್ದಾರೆ.

ಈ ವಿಷಯವನ್ನು ಸುದ್ದಿಗೋಷ್ಠಿಯಲ್ಲಿ ತಿಳಿಸಿದ ಬೃಹತ್ ನೀರಾವರಿ ಸಚಿವ ಗೋವಿಂದ ಕಾರಜೋಳ, ಮೇಕೆದಾಟು ಯೋಜನೆ ವಿಳಂಬಕ್ಕೆ ಕಾಂಗ್ರೆಸ್ ಕಾರಣವೆಂದು ದಾಖಲೆ ಸಹಿತ ಆರೋಪಿಸಿದರಲ್ಲದೆ, ನಮ್ಮ ಅವಧಿಯಲ್ಲಿ ಉದ್ದೇಶಿತ ಯೋಜನೆ ಆರಂಭವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಯೋಜನೆ ಅನುಷ್ಠಾನಕ್ಕೆ ಮುಖ್ಯಮಂತ್ರಿ ಅವರು, ಕೇಂದ್ರ ಜಲ ಸಂಪನ್ಮೂಲ ಸಚಿವರನ್ನು ಮತ್ತು ಪರಿಸರ ಸಚಿವರನ್ನು ಎರಡು, ಮೂರು ಬಾರಿ ಭೇಟಿ ಮಾಡಿದ್ದಾರೆ. ನ್ಯಾಯಾಲಯದಲ್ಲಿ ತಕರಾರು ಇರುವುದರಿಂದ ಯೋಜನೆ ವಿಳಂಬವಾಗಿದೆಯೇ ಹೊರತು ಆರ್ಥಿಕ ಮುಗ್ಗಟ್ಟಿನಿಂದ ಅಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದ ಇತಿಹಾಸದಲ್ಲಿ ಈ ಹಿಂದೆ ನೀರಾವರಿಗೆ ಯಾವ ಸರ್ಕಾರವೂ ಕೊಡದಷ್ಟು ಹಣವನ್ನು ಮುಂದಿನ ಬಜೆಟ್‌ನಲ್ಲಿ ನಮ್ಮ ಸರ್ಕಾರ ಕೊಡಲಿದೆ. ಕಾಂಗ್ರೆಸ್ ಪಕ್ಷದವರು ಈ ಹಿಂದೆ ಪಾದಯಾತ್ರೆ ಮಾಡಿ ಕೃಷ್ಣಾ ಕೊಳ್ಳದ ಜನರಿಗೆ ಮೋಸ ಮಾಡಿದರು. ಈಗ ಪಾದಯಾತ್ರೆ ಮಾಡಿ ಕಾವೇರಿ ಕೊಳ್ಳದ ಜನರಿಗೆ ಮೋಸ ಮಾಡಲು ಹೊರಟಿದ್ದಾರೆ ಎಂದು ಆರೋಪಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಪ್ರತಿಪಕ್ಷ ನಾಯಕ ಸಿದ್ಧರಾಮಯ್ಯ ಅವರ ನೇತೃತ್ವದಲ್ಲಿ ನಡೆಯುತ್ತಿರುವ ಮೇಕೆದಾಟು ಪಾದಯಾತ್ರೆಯ ವಿರುದ್ಧ ಕಿಡಿಕಾರಿದ ಅವರು, ಕಾವೇರಿ ನದಿ ನೀರಿನ ವಿಷಯದಲ್ಲಿ ರಾಜ್ಯಕ್ಕೆ ಅನ್ಯಾಯವಾಗಿದ್ದರೆ ಅದು ಕಾಂಗ್ರೆಸ್‌ನಿಂದಲೇ ಹೊರತು ಬಿಜೆಪಿಯಿಂದ ಅಲ್ಲ ಎಂದಿದ್ದಾರೆ.

ಸಿದ್ಧರಾಮಯ್ಯ ಸರ್ಕಾರವಿದ್ದಾಗ ಮೇಕೆದಾಟು ಅಣೆಕಟ್ಟು ಯೋಜನೆಯ ಡಿ.ಪಿ.ಆರ್. ತಯಾರಿಸಲು ವಿಳಂಬ ಮಾಡಲಾಯಿತು. ಮೇಕೆದಾಟು ಯೋಜನೆಗೆ (3ನೇ ಪುಟಕ್ಕೆ)

# ಕೊನೆಯ ಪ್ರಜೆ ಬರುವವರೆಗೂ ಸರ್ಕಾರದ ಪ್ರಯತ್ನ ನಿರಂತರ

ರಾಣೇಬೆನ್ನೂರು, ಮಾ. 2- ಯುಕ್ರೇನ್‌ನಲ್ಲಿ ಸಿಲುಕಿರುವ ಭಾರತದ ಕೊನೆಯ ಪ್ರಜೆಯನ್ನು ಕರೆ ತರುವವರೆಗೂ ಸರ್ಕಾರ ಪ್ರಯತ್ನ ನಡೆಸುತ್ತಿರುತ್ತದೆ. ಈ ಕಾರ್ಯದಲ್ಲಿ ನಾಲ್ವರು ಸಚಿವರು ಹಾಗೂ ಅಧಿಕಾರಿಗಳ ತಂಡ ಸಂಪೂರ್ಣ ತೊಡಗಿಕೊಂಡಿದೆ. ಪ್ರತಿ ನಿಮಿಷ ಸಹ ಮಹತ್ವದಿಂದ ಕೂಡಿದ್ದು, ಕಟ್ಟೆಚ್ಚರದಿಂದ ಕಾರ್ಯ ನಡೆದಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹೇಳಿದರು.

ಅವರು ನಿನ್ನೆ ರಷ್ಯಾ-ಯುಕ್ರೇನ್ ಸಂಘರ್ಷದಲ್ಲಿ ಬಲಿಯಾದ ವೈದ್ಯಕೀಯ ವಿದ್ಯಾರ್ಥಿ ಚಳಗೇರಿಯ ನವೀನ್ ಮನೆಗೆ ಆಗಮಿಸಿ, ಪಾಲಕರಿಗೆ ಸಾಂತ್ವನ ಹೇಳಿ ಮಾಧ್ಯಮಗೋಷ್ಠಿ ನಡೆಸಿದರು.

ಹಾರ್ಕಿವ್ ಬಂಕರ್‌ನಲ್ಲಿರುವ ವಿದ್ಯಾರ್ಥಿಗಳು ಹಾಗೂ ಇತರರು ರೈಲ್ವೆ ಮೂಲಕ ಗಡಿ ಪ್ರದೇಶಕ್ಕೆ ಬರಲು ವ್ಯವಸ್ಥೆ ಆಗಿದೆ. 20 ತಾಸುಗಳ ಪ್ರಯಾಣದ ನಂತರ ವಿಮಾನದಲ್ಲಿ ಭಾರತಕ್ಕೆ ಬರುವ ಬಗ್ಗೆ ಮಾಹಿತಿ ಇದೆ. ಇನ್ಮುಂದೆ ಭಾರತೀಯನ ಜೀವಕ್ಕೂ ತೊಂದರೆ ಆಗದಂತೆ ಸರ್ಕಾರ ಎಚ್ಚರ ವಹಿಸುತ್ತದೆ ಎಂದು ಸಚಿವ ಜೋಷಿ ಹೇಳಿದರು.

ಪಾಲಕರ ಬೇಡಿಕೆಯಂತೆ ಅವರ ಮಗನ ಕಳೇಬರ ಹಾಗೂ ಇತರೆ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಕರೆತರುವ ಹಾಗೂ ಅವರ ವಿದ್ಯಾರ್ಜನೆಯಲ್ಲಿ ತೊಡಕು ಬಾರದಂತೆ, ನವೀನ್ (2ನೇ ಪುಟಕ್ಕೆ)

**ರಷ್ಯಾ-ಉಕ್ರೇನ್ ಸಂಘರ್ಷಕ್ಕೆ ಬಲಿಯಾದ ನವೀನ್ ಕುಟುಂಬಕ್ಕೆ ಸಾಂತ್ವನ ಹೇಳಿದ ಸಚಿವ ಜೋಷಿ**



### ಕುಟುಂಬದವರಿಗೆ ಕಿರಿಕಿರಿ

ಬಡತನದಲ್ಲಿಯೇ ಬೆಳೆದು ಬದುಕು ಕಟ್ಟಿಕೊಳ್ಳಲು ಪ್ರಯತ್ನ ನಡೆಸಿದ ಮಗ ನವೀನ್ ನನ್ನು ಕಳೆದ ಕೊಂಡ ತಂದೆ ಶೇಖರಗೌಡ, ತಾಯಿ ವಿಜಯಲಕ್ಷ್ಮಿ, ಸಹೋದರ ಹರ್ಷ ಇವರುಗಳು ದುಃಖದಲ್ಲಿ ಮುಳುಗಿದ್ದರೂ ಸಹ ಸಾಂತ್ವನ ಹೇಳಲು ಬರುವ ಅಧಿಕಾರಸ್ಥರ, ಅವರ ಜೊತೆಗಾರರ, ಪಿರಿಕಿರಿ ರಾಜಕಾರಿಣಿಗಳ, ಅದನ್ನು ಸೆರೆಹಿಡಿಯಲು ಪ್ರಯತ್ನ ನಡೆಸುವ ವಿವಿಧ ಮಾಧ್ಯಮದವರು ಊಟ ಮಾಡಲು, ಚಹಾ ಸೇವಿಸಲು ಪರದಾಡುವ ಪರಿಸ್ಥಿತಿ ಉಂಟಾಗಿದೆ. ಅದು ಅವರಿಗೆ ಕಿರಿಕಿರಿ ಉಂಟು ಮಾಡಿದೆ. ಇದು ಕಡಿಮೆ ಆಗಬೇಕು ಎನ್ನುವ ಕಳಕಳಿ ಜಿಲ್ಲಾಧಿಕಾರಿ ಶೆಟ್ಟೆಣ್ಣನವರಿಂದ ಕೇಳಿಬಂದಿತು.

### ಕಳೇಬರ ತರಲು ವಿಮಾನ ಕಳಿಸುವೆ..

ನವೀನ್ ಕಳೇಬರ ಹಾಗೂ ಅಲ್ಲಿರುವ ನನ್ನ ತಾಲ್ಲೂಕಿನ ಆರು ವಿದ್ಯಾರ್ಥಿಗಳನ್ನು ಕರೆತರಲು ಕೇಂದ್ರ ಸರ್ಕಾರ ಅನುಮತಿ ನೀಡಿದರೆ, ನನ್ನದೇ ವಿಮಾನ ತೆಗೆದುಕೊಂಡು ಹೋಗುವೆ. ಮುಖ್ಯಮಂತ್ರಿಗಳು ಅನುಮತಿ ಕೊಡಿಸಬೇಕು ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಮನವಿ ಮಾಡಿದರು.

## ಪೋಸ್ಟ್ ಆಫೀಸ್‌ಗಳಲ್ಲಿ ಕೋರ್ ಬ್ಯಾಂಕಿಂಗ್

ದಾವಣಗೆರೆ, ಮಾ.02- ಪ್ರಸಕ್ತ ವರ್ಷದಲ್ಲಿ 1.5 ಲಕ್ಷ ಪೋಸ್ಟ್ ಆಫೀಸ್‌ಗಳು ಸಂಪೂರ್ಣವಾಗಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯ ಅಡಿಯಲ್ಲಿ ಬರಲಿವೆ ಎಂದು ವಲಯದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರಕುಮಾರ್ ತಿಳಿಸಿದ್ದಾರೆ.

ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಎಸ್.ಎಂ.ಎಸ್. ಬ್ಯಾಂಕಿಂಗ್ ಮುಖಾಂತರ ಖಾತೆಗಳ ಆನ್‌ಲೈನ್ ನಿರ್ವಹಣೆಯ ಅವಕಾಶದ ಜೊತೆಗೆ ಪೋಸ್ಟ್ ಆಫೀಸಿನ ಖಾತೆಗಳು ಮತ್ತು ಬ್ಯಾಂಕ್ ಖಾತೆಗಳ ನಡುವೆ ಆನ್‌ಲೈನ್ ಹಣ ವರ್ಗಾವಣೆಯ (2ನೇ ಪುಟಕ್ಕೆ)

## 31 ವಿಮಾನಗಳಲ್ಲಿ 6,300 ಜನರು ವಾಪಸ್

ನವದೆಹಲಿ, ಮಾ. 2 – ಸಮರ ಪೀಡಿತ ಉಕ್ರೇನ್ ದೇಶದ ನೆರೆ ದೇಶಗಳಿಗೆ 31 ವಿಮಾನಗಳನ್ನು ಕಳಿಸಿ 6,300 ವಿದ್ಯಾರ್ಥಿಗಳನ್ನು ವಾಪಸ್ ಕರೆ ತರಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ಅಧಿಕೃತ ಮೂಲಗಳು ತಿಳಿಸಿವೆ.

ಏರ್ ಇಂಡಿಯಾ, ಏರ್ ಇಂಡಿಯಾ ಎಕ್ಸ್‌ಪ್ರೆಸ್, ಇಂಡಿಗೋ, ಸ್ಪೈಸ್‌ಜೆಟ್ ಹಾಗೂ ವಾಯುಪಡೆಯ ವಿಮಾನಗಳನ್ನು ಬಳಸಿ, 'ಆಪರೇಷನ್ ಗಂಗಾ' ಕಾರ್ಯಾಚರಣೆ ನಡೆಸಲಾಗುತ್ತಿದೆ.

ಮಾರ್ಚ್ 2ರ ನಂತರ 21 (3ನೇ ಪುಟಕ್ಕೆ)

## ನವೀನ್ ಕಳೇಬರ ತಾಯ್ನಾಡಿಗೆ ತರುವುದು ಪ್ರಥಮ ಆದ್ಯತೆ

ಬೆಂಗಳೂರು, ಮಾ.2 - ಯುಕ್ರೇನ್‌ನಲ್ಲಿ ಮೃತಪಟ್ಟಿರುವ ನವೀನ್ ಪಾರ್ಥಿವ ಶರೀರವನ್ನು ತಾಯ್ನಾಡಿಗೆ ತರುವುದು ಸರ್ಕಾರದ ಪ್ರಥಮ ಆದ್ಯತೆಯಾಗಿದೆ. ನವೀನ್ ಕುಟುಂಬಕ್ಕೆ ಎಲ್ಲ ಸಹಾಯ, ಸಹಕಾರ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯುಕ್ರೇನ್ ನಲ್ಲಿ ಮೃತಪಟ್ಟ ನವೀನ್ ಗ್ಯಾನಗೌಡರ್ ಅವರು ಹಾಕಿಕೊಂಡಿರುವ ಬಟ್ಟೆಗಳನ್ನು ಹೋಲುವ ಕೆಲವು ಛಾಯಾಚಿತ್ರಗಳನ್ನು ಆತನ ಸ್ನೇಹಿತರು ಕಳುಹಿಸಿಕೊಟ್ಟಿದ್ದಾರೆ. ಶೆಲ್ ದಾಳಿ ನಿಂತ ಮೇಲೆ ನವೀನ್ ಜೊತೆಗಿದ್ದವರು ತೆಗೆದ ಚಿತ್ರಗಳವು. ಈ ಬಗ್ಗೆ ವಿದೇಶಾಂಗ (2ನೇ ಪುಟಕ್ಕೆ)

## ಉಕ್ಕಡಗಾತ್ರಿ ಜಾತ್ರೆಗೆ ಶ್ರೀಗಳ ಚಾಲನೆ



ಮಲೆಬೆನ್ನೂರು, ಮಾ.2- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಬುಧವಾರದಿಂದ ಒಂದು ವಾರ ಕಾಲ ಜರುಗುವ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಮಹಾ ಶಿವರಾತ್ರಿ ಜಾತ್ರಾ ಮಹೋತ್ಸವಕ್ಕೆ ನಂದಿಗುಡಿ ಬೃಹನ್ಮಠದ ಶ್ರೀ ಸಿದ್ಧ ರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ನಂದಿ ಧ್ವಜಾರೋಹಣದ ಮೂಲಕ ಚಾಲನೆ ನೀಡಿದರು.

ನಂತರ ಹಮ್ಮಿಕೊಂಡಿದ್ದ ವೇದಿಕೆ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಶ್ರೀಗಳು, ಸುಕ್ಷೇತ್ರಕ್ಕೆ ಬರುವ ಭಕ್ತರು ಸ್ವಚ್ಛತೆ ಕಾಪಾಡಬೇಕು ಎಂದು ತಿಳಿ ಹೇಳಿದರು.

ಭಕ್ತರು ಭಕ್ತಿಯಿಂದ ನೀಡುವ ಕಾಣಿಕೆ, ಹರಕೆ ಸಮರ್ಪಕವಾಗಿ ಬಳಕೆ ಆಗುತ್ತಿರುವುದರಿಂದ ಕ್ಷೇತ್ರದಲ್ಲಿ ಅಭಿವೃದ್ಧಿ ಯೋಜನೆಗಳು ನಿರಂತರವಾಗಿ ನಡೆಯುತ್ತಿವೆ. ಅನ್ನ ದಾಸೋಹದ ಜೊತೆಗೆ ಜ್ಞಾನ ದಾಸೋಹಕ್ಕೆ ಒತ್ತು ನೀಡಲಾಗಿದ್ದು, ಈಗಿರುವ (2ನೇ ಪುಟಕ್ಕೆ)


**ಕೃತಜ್ಞತೆಗಳು**



ಹರಿಹರ ತಾಲ್ಲೂಕು ಕೊಂಡಜ್ಜಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ನೂತನ ಕಟ್ಟಡ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರದಿಂದ 10 ಲಕ್ಷ ರೂ. ಗಳ ಅನುದಾನ ಮಂಜೂರು ಮಾಡಿಸಿಕೊಟ್ಟಿರುವ ಮಾಜಿ ಸಚಿವರೂ, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಹಿರಿಯ ಶಾಸಕರೂ ಆದ

**ಶ್ರೀ ಎಸ್.ಎ. ರವೀಂದ್ರನಾಥ್**


ಅವರಿಗೆ ಹೃದಯಪೂರ್ವಕ ಕೃತಜ್ಞತೆಗಳು.



ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಅಭಿವೃದ್ಧಿ ಸಮಿತಿ ಹಾಗೂ ಕೊಂಡಜ್ಜಿ ಗ್ರಾಮಸ್ಥರು

ಶಾನುಭೋಗರ ನಾಗರಾಜರಾವ್
ಕೊಂಡಜ್ಜಿ

World Health Organization
OREVA RS
CHAIN OF HEARING CLINICS



ಜೀವನವನ್ನು ಆಲಿಸಲು ಕಾಳಜಿಯಿಂದ ಕೇಳಿರಿ...!

3ನೇ ಮಾರ್ಚ್ 2022

**ವಿಶ್ವ ಶ್ರವಣ ದಿನಾಚರಣೆ**

**ಉಚಿತ ಶ್ರವಣ ತಪಾಸಣೆ**

ಕರ್ನಾಟಕದಾದ್ಯಂತ ಇರುವ ನಮ್ಮ ಕೇಂದ್ರಗಳಲ್ಲಿ +ಮೊಬೈಲ್ ಸಂಪರ್ಕ + ಪ್ರತಿಕ್ರಿಯೆ ರದ್ದತಿಯನ್ನು ಹೆಚ್ಚಿಸಿ

*T & C Apply



ಗೋಚರವಾಗದ ಹಾಗೂ ರಿಚಾರ್ಜ್ ಮಾಡಬಹುದಾದ ಶ್ರವಣ ಸಾಧನಗಳು ಲಭ್ಯ

ಒರೆವ ಆರ್.ಎಸ್. #171/4 ಎಬಿ, ಶಾಸ್ತ್ರಿ ಭವನ, ಕಾವೇರಿ ಫಾರ್ಮ
ಪಿ.ಜೆ. ಬಡಾವಣೆ, ದಾವಣಗೆರೆ - 577 002.
9945186993 / 08192 200383

# ಸರ್ಕಾರಿ ಕಾಲೇಜಿಗೆ 2.76 ಕೋಟಿ ರೂ. ಅನುದಾನ



**ಜಗಳೂರು ಶಾಸಕ ಎಸ್.ವಿ. ರಾಮಚಂದ್ರ**

ಜಗಳೂರು, ಮಾ.2- ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೊಠಡಿಗಳ ಹಾಗೂ ಕುಡಿಯುವ ನೀರಿಗೆ 50 ಲಕ್ಷ ಸೇರಿದಂತೆ ಮೂಲಸೌಕರ್ಯಕ್ಕಾಗಿ 2.76 ಕೋಟಿ ರೂ. ಅನುದಾನ ಮಂಜೂರಾಗಿದೆ ಎಂದು ಶಾಸಕ ಎಸ್.ವಿ.ರಾಮಚಂದ್ರ ತಿಳಿಸಿದ್ದಾರೆ.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ, ಕ್ರೀಡಾ, ಎನ್ ಎಸ್‌ಎಸ್, ಯುವ ರೆಡ್ ಕ್ರಾಸ್, ರೋವರ್ಸ್ ಹಾಗೂ 1.20 ಕೋಟಿ ರೂ. ವೆಚ್ಚದ ನೂತನ ಕಟ್ಟಡಗಳ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಸರ್ಕಾರಿ ಕಾಲೇಜು ವರದಾನವಾಗಿದ್ದು, ಕೋವಿಡ್ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಭೌತಿಕ ತರಗತಿಗಳಿಲ್ಲದೆ ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯಾಗಿತ್ತು. ಆದರೆ ಕೋವಿಡ್ ಮಧ್ಯೆ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಉತ್ಸಾಹ ಶ್ಲಾಘನೀಯ ಎಂದರು.

ಪ್ರಾಧ್ಯಾಪಕರು ವೈಮನಸ್ಸುಗಳನ್ನು ತೊರೆದು ಗುಣಮಟ್ಟದ ಶಿಕ್ಷಣಕ್ಕೆ ಒತ್ತು ನೀಡಬೇಕು. ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ಬದಿಗಿಟ್ಟು ವಿದ್ಯಾರ್ಥಿಗಳ ಬಗ್ಗೆ ಕಾಳಜಿ ವಹಿಸವಹಿಬೇಕು ಎಂದ ಶಾಸಕರು, ಶೈಕ್ಷಣಿಕ ವರ್ಷದಲ್ಲಿ ಪ್ರತಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದವರಿಗೆ ಒಬ್ಬರಿಗೆ 25 ಸಾವಿರ ಪ್ರೋತ್ಸಾಹ ಧನ ನೀಡಲಾಗುವುದು ಎಂದರು.

ವಿದ್ಯಾರ್ಥಿಗಳಿಂದ ಸರ್ಕಾರಿ ಬಸ್ ಸೌಕರ್ಯ ಸಮಸ್ಯೆ, ಖಾಯಂ ಉಪನ್ಯಾಸಕರು ಇಲ್ಲದಿರುವುದು ಹಾಗೂ ಎರಡು ವರ್ಷಗಳಿಂದ ವಿದ್ಯಾರ್ಥಿ ವೇತನ ಬಾರದಿರುವ ಸಮಸ್ಯೆಗಳನ್ನು ಆಲಿಸಿದರು.

ಈಗಾಗಲೇ ಕೆ.ಎಸ್.ಆರ್.ಟಿ.ಸಿ ಡಿಪೋ ನಿರ್ಮಾಣಕ್ಕೆ ಮರೇನಹಳ್ಳಿ ರಸ್ತೆಯಲ್ಲಿ 4 ಎಕರೆ ಜಮೀನು ನಿಗದಿಯಾಗಿದ್ದು, ಶೀಘ್ರ ಕಾಮಗಾರಿಗೆ ಚಾಲನೆ ನೀಡಲಾಗುವುದು. ನಂತರ 30 ಸರ್ಕಾರಿ ಬಸ್‌ಗಳನ್ನು ವಿವಿಧ ಮಾರ್ಗಗಳಲ್ಲಿ ಹಳ್ಳಿಗಳಿಗೆ ಬಸ್ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗು ವುದು ಎಂದರು.

ಪಟ್ಟಣ ಪಂಚಾಯಿತಿಯಿಂದ 25 ಲಕ್ಷ ವೆಚ್ಚದಲ್ಲಿ ನೀರಿನ ಸಂಪ್ ನಿರ್ಮಿಸಿ ಕಾಲೇಜಿಗೆ ನೀರು ಪೂರೈಕೆ ಮಾಡಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

**15 ದಿನಗಳಲ್ಲಿ ತುಪ್ಪದಹಳ್ಳಿ ಕೆರೆಗೆ ನೀರು :** ತುಪ್ಪದಹಳ್ಳಿ ಕೆರೆಗೆ 15 ದಿನಗಳಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗುವುದು. ನೀರಿನ ಮೂಲಗಳಿಲ್ಲದ ಜಗಳೂರಿಗೆ ಹೆಣ್ಣು ಮಕ್ಕಳನ್ನು ವಿವಾಹ ಮಾಡಿಕೊಡಲು ಹಿಂಜರಿಯುತ್ತಿದ್ದರು. ಆದರೆ 57 ಕೆರೆತುಂಬಿಸುವ ಯೋಜನೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಸಾಕಾರಗೊಂಡಿದ್ದರಿಂದ ಮುಂದಿನ ದಿನಗಳಲ್ಲಿ ಬರದನಾಡು ಹಸಿರು ನಾಡಾಗಿ ಸಮೃದ್ಧಿ ಜೀವನ ಸಾಗಿಸುವ ಕಾಲ ಸನ್ನಿಹಿತವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಬಿಎಸ್ಸಿ ವಿಭಾಗದಲ್ಲಿ 8 ನೇ ರ್‍ಯಾಂಕ್ ಪಡೆದ ಎಂ.ಎಸ್. ಷಹನಾಜ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಶಾಸಕ ರಾಮಚಂದ್ರ ಅವರು ವೈಯಕ್ತಿಕವಾಗಿ 20 ಸಾವಿರ ನಗದು ವಿತರಿಸಿ ಶುಭ ಹಾರೈಸಿದರು.

ರಾಷ್ಟ್ರೀಯ ಕ್ರೀಡಾಪಟು ಎ.ಎಚ್. ಸಾಗರ್ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಪ.ಪಂ ಅಧ್ಯಕ್ಷ ಸಿದ್ದಪ್ಪ, ಸದಸ್ಯರಾದ ನವೀನ್, ದೇವರಾಜ್, ಪಾಪಲಿಂಗಪ್ಪ, ವಿಎಸ್‌ಎಸ್‌ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು, ಪ್ರಾಂಶುಪಾಲ ಬಿ.ಕೆ. ಬಸವರಾಜ್, ಕಾಲೇಜು ಅಭಿವೃದ್ದಿ ಸಮಿತಿ ಸದಸ್ಯ ವಕೀಲ ಹನುಮಂತಪ್ಪ, ಪಿ.ಎಸ್. ಅರವಿಂದ್, ಫಾತಿಮಾ, ಸಹಾಯಕ ಪ್ರಾಧ್ಯಾಪಕರುಗಳಾದ ಲಾಲ್ ಸಿಂಗ್ ನಾಯ್ಕ, ಸಲ್ಮಾ ತಾಜ್, ಅಮರೇಶ್, ಪುಷ್ಪಲತಾ, ಮಲ್ಲಿಕಾರ್ಜುನ ಕಪ್ಪಿ, ವೈ. ವೆಂಕಟೇಶ್, ಗುತ್ತಿಗೆದಾರ ಪಿ.ಎಂ.ಮೋಹನ್ ಸೇರಿದಂತೆ ವಿದ್ಯಾರ್ಥಿಗಳು, ಉಪನ್ಯಾಸಕರು ಉಪಸ್ಥಿತರಿದ್ದರು.

## ರಾಜನಹಳ್ಳಿ ಶ್ರೀಗಳ ಹೋರಾಟಕ್ಕೆ ವಚನಾನಂದ ಶ್ರೀಗಳ ಬೆಂಬಲ



**21 ದಿನಕ್ಕೆ ಕಾಲಿಟ್ಟ ಧರಣಿ ; ಶಾಸಕ ಎಸ್. ರಾಮಪ್ಪ, ತೇಜಸ್ವಿ ಪಟೇಲ್ ಭಾಗಿ**

ಬೆಂಗಳೂರು, ಮಾ.2- ಎಸ್ಸಿ - ಎಸ್ಟಿ ಮೀಸಲಾತಿ ಹೆಚ್ಚಳಕ್ಕೆ ಒತ್ತಾಯಿಸಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಬುಧವಾರ 21ನೇ ದಿನಕ್ಕೆ ಕಾಲಿಟ್ಟಿದೆ.

ಈ ದಿನದ ಧರಣಿಯಲ್ಲಿ ಭಾಗವಹಿಸಿದ್ದ ಹರಿಹರದ ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ ಮಾತನಾಡಿ, ಶ್ರೀಗಳ ಹೋರಾಟಕ್ಕೆ ಸರ್ಕಾರ ತಕ್ಷಣ ಸ್ಪಂದಿಸಬೇಕು. ಈಗಾಗಲೇ ಆಯೋಗ ವರದಿ ನೀಡಿದ್ದರೂ ಸರ್ಕಾರ ವಿಳಂಬ ನೀತಿ ಅನುಸರಿಸಬಾರದು. ಈ ರೀತಿ ಬೀದಿಯಲ್ಲಿ ಧರಣಿ ಮಾಡಲು ಅವಕಾಶ ಕೊಡಬಾರದು.

ಹರಿಹರ ಶಾಸಕ ಎಸ್. ರಾಮಪ್ಪ, ದಲಿತ ಹೋರಾಟಗಾರರಾದ ಮಾರಸಂದ್ರ ಮುನಿಯಪ್ಪ, ಎನ್.ವೆಂಕಟಸ್ವಾಮಿ, ದಾವಣಗೆರೆ ಜಿ.ಪಂ. ಮಾಜಿ ಸದಸ್ಯ ತೇಜಸ್ವಿ ಪಟೇಲ್, ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ, ಹರಿಹರದ ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಎ.ಆರೀಫ್ ಅಲಿ, ಸಮಾಜದ ಮುಖಂಡರಾದ ಸಿರಿಗೆರೆ ತಿಪ್ಪೇಶ್, ಟಿ.ಈಶ್ವರ್, ನರಸಿಂಹ ನಾಯಕ, ಪ್ರಭುಸ್ವಾಮಿ, ಚಳುವಳಿ ರಾಜಣ್ಣ, ಹಾವೇರಿ ಜಿಲ್ಲಾಧ್ಯಕ್ಷ ರಮೇಶ್ ಆನವಟ್ಟಿ ಸೇರಿದಂತೆ ಮುಧೋಳ್, ಸವಣೂರು, ಬೆಂಗಳೂರು ನಗರದ ಮುಖಂಡರುಗಳು ಭಾಗವಹಿಸಿದ್ದರು.

## ಬಜೆಟ್‌ನಲ್ಲಿ ಉದ್ಯೋಗ ಮತ್ತು ಕೃಷಿಗೆ ಹೆಚ್ಚಿನ ಒತ್ತು ನೀಡಲಿ



**ಹರಪನಹಳ್ಳಿ**

ಹರಪನಹಳ್ಳಿ, ಮಾ.2- ಪ್ರಸಕ್ತ ಸಾಲಿನ 2022-23ನೇ ಆರ್ಥಿಕ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಪ್ರತ್ಯೇಕ ಉದ್ಯೋಗ ಮತ್ತು ಕೃಷಿ ಬಜೆಟ್ ಮಂಡಿಸಬೇಕೆಂದು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್ ಅವರು ಒತ್ತಾಯಿಸಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರ ಮಂಡಿಸಲಿರುವ ಆರ್ಥಿಕ ಬಜೆಟ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಕೊರೊನಾ ಮಹಾಮಾರಿಯಿಂದಾಗಿ ಉದ್ಯೋಗ ಕಳೆದುಕೊಂಡು ಕಂಗಾಲಾಗಿರುವ ಯುವ ಜನಾಂಗದ ಭವಿಷ್ಯ ರೂಪಿಸುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಉದ್ಯೋಗ ಬಜೆಟ್ ಮಂಡಿಸಬೇಕು ಮತ್ತು ಪ್ರಕೃತಿ ವಿಕೋಪದಿಂದಾಗಿ ಬೆಳೆಹಾನಿ, ಆಸ್ತಿ - ಪಾಸ್ತಿ ಕಳೆದುಕೊಂಡ ರೈತಾಪಿ ವರ್ಗಕ್ಕೆ ನೆರವಾಗುವ ನಿಟ್ಟಿನಲ್ಲಿ ಪ್ರತ್ಯೇಕವಾಗಿ ಕೃಷಿ ಬಜೆಟ್ ಮಂಡಿಸಬೇಕು.

ಅಲ್ಲದೇ ಪಕ್ಕದ ರಾಜ್ಯ ಆಂಧ್ರದ ಮಾದರಿಯ ರೀತಿಯಲ್ಲಿ ರಾಜ್ಯದಲ್ಲಿಯೂ ಸಹ ಸರ್ಕಾರ ನಿರುದ್ಯೋಗ ಸಮಸ್ಯೆ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಉದ್ಯೋಗಗಳನ್ನು ಸೃಷ್ಠಿ ಮಾಡುವ ಹಾಗೆ ಬಜೆಟ್ ಮಂಡಿಸಬೇಕು ಎಂದೂ ಸಹ ಶಶಿಧರ್ ಆಗ್ರಹಿಸಿದ್ದಾರೆ.

## ಪೋಸ್ಟ್ ಆಫೀಸ್‌ಗಳಲ್ಲಿ ಬ್ಯಾಂಕಿಂಗ್

(1ನೇ ಪುಟದಿಂದ) ಅನುಕೂಲವೂ ಸಾಧ್ಯವಾಗಲಿದೆ, ಜೊತೆಗೆ ಗ್ರಾಮೀಣ ಪ್ರದೇಶದ ರೈತರು ಮತ್ತು ಹಿರಿಯ ನಾಗರಿಕರಿಗೆ ಸಹಾಯವಾಗಲಿದೆ.

ಕೇಂದ್ರದ ಗ್ರಾಮೀಣ ಅಭಿವೃದ್ಧಿ ಮಂತ್ರಾಲಯ ಫೆ.23 ರಂದು ಬಜೆಟ್ ಘೋಷಣೆಯ ಅನುಷ್ಠಾನದ ಕುರಿತು ಅಂಚೆ ಇಲಾಖೆಯೂ ಸೇರಿದಂತೆ ವಿವಿಧ ಇಲಾಖೆಗಳನ್ನು ಒಗ್ಗೂಡಿಸಿ ವೆಬಿನಾರ್ ಒಂದನ್ನು ಆಯೋಜಿಸಿತ್ತು.

ಕರ್ನಾಟಕ ಅಂಚೆ ವಲಯದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಸಹ ಈ ವೆಬಿನಾರ್‌ನಲ್ಲಿ ಭಾಗವಹಿಸಿದ್ದರು.

ಸಭೆಯನ್ನು ಪ್ರಧಾನಿ ಉದ್ಘಾಟಿಸಿದರು. ಸಭೆಯಲ್ಲಿ ಪ್ರಸ್ತಾಪಗೊಂಡ ಮುಖ್ಯಾಂಶಗಳು ಹೀಗಿವೆ: ಸರ್ಕಾರದ ಎಲ್ಲ ಸಂಸ್ಥೆಗಳು ಹಾಗೂ ಮಧ್ಯಸ್ಥಿಕೆದಾರರು ಗ್ರಾಮ ಪಂಚಾಯತಿ ಮಟ್ಟದಲ್ಲಿ ಈ ಉದ್ದೇಶಕ್ಕಾಗಿ ಸಮನ್ವಯಗೊಳ್ಳಬೇಕಾದ ಅಗತ್ಯದ ಕುರಿತು ಹೆಚ್ಚಿನ ಒತ್ತು ನೀಡಲಾಯಿತು.

ಗ್ರಾಮೀಣ ಭಾಗದ ಡಿಜಿಟಲ್ ಆರ್ಥಿಕ ಒಳಗೊಳ್ಳುವಿಕೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರ ಭಾಗವಹಿಸುವಿಕೆಯ ಕುರಿತು ಗಮನ ಹರಿಸಿ, ಜಾಗೃತಿ ಮೂಡಿಸುವ ಮುಂದಾಳತ್ವವನ್ನು ಅಂಚೆ ಇಲಾಖೆಯು ನಿರ್ವಹಿಸಬೇಕಿದೆ.

ಹಳ್ಳಿಗಳಲ್ಲಿರುವ ಅಂಚೆ ಕಚೇರಿಯ ಶಾಖೆಗಳನ್ನು ಸೇರಿಸಿ ಎಲ್ಲ ಅಂಚೆ ಕಚೇರಿಗಳು ಕೋರ್ ಬ್ಯಾಂಕಿಂಗ್‌ನ ಅಡಿಯಲ್ಲಿ ಬರಬೇಕು. ಆನ್‌ಲೈನ್ ಹಣ ವರ್ಗಾವಣೆ ಸೇರಿದಂತೆ ಉಳಿದೆಲ್ಲ ಸೌಲಭ್ಯಗಳು ದೇಶದ ಮೂಲೆ, ಮೂಲೆಗಳನ್ನು ತಲುಪಬೇಕು.

ಸಣ್ಣ ಉಳಿತಾಯದ ಪ್ರತಿನಿಧಿಗಳು, ಮಹಿಳಾ ಪ್ರಧಾನ ಕೇಂದ್ರೀಯ ಬಚತ್ ಯೋಜನೆ ಪ್ರತಿನಿಧಿಗಳು, ಅಂಚೆ ಉಳಿತಾಯ ಖಾತೆದಾರರು, ಸ್ವ-ಸಹಾಯ ಸಂಘಗಳು ಮತ್ತು ಬ್ಯಾಂಕಿಂಗ್ ತಜ್ಞರ ಅಭಿಪ್ರಾಯಗಳನ್ನು ಈ ವೆಬಿನಾರ್‌ನಲ್ಲಿ ತೆಗೆದುಕೊಳ್ಳಲಾಯಿತು.

ಕರ್ನಾಟಕದಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ ಸುಮಾರು 28 ಲಕ್ಷ ಫಲಾನುಭವಿಗಳಿಗೆ ಅಂಚೆ ಖಾತೆಯ ಮೂಲಕ ಸಾಮಾಜಿಕ ಭದ್ರತಾ ಪಿಂಚಣಿ ತಲುಪಿಸಲಾಗಿದೆ. ರಾಜ್ಯ ಸರ್ಕಾರದೊಟ್ಟಿಗೆ ಕೈ ಜೋಡಿಸಿ, ಭಾಗ್ಯಲಕ್ಷ್ಮಿ ಯೋಜನೆಯ ಅಡಿಯಲ್ಲಿ ಅರ್ಹ ಹೆಣ್ಣು ಮಕ್ಕಳ ಹೆಸರಿನಲ್ಲಿ 1,56,056 ಸುಕನ್ಯಾ ಸಮೃದ್ಧಿ ಖಾತೆ ತೆರೆಯಲಾಗಿದೆ. ಜನ ಸೇವೆಗೆ ಕರ್ನಾಟಕ ಅಂಚೆ ವಲಯ ಕಂಕಣಬದ್ಧವಾಗಿದೆ ಎಂದು ರಾಜೇಂದ್ರಕುಮಾರ್ ತಿಳಿಸಿದ್ದಾರೆ.

## ಉಕ್ಕಡಗಾತ್ರಿ ಜಾತ್ರೆಗೆ ಶ್ರೀಗಳ ಚಾಲನೆ

(1ನೇ ಪುಟದಿಂದ) ಪ್ರಾಥಮಿಕ, ಪ್ರೌಢ ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣಕ್ಕೂ ಗಮನ ಹರಿಸಬೇಕು ಎಂದು ಟ್ರಸ್ಟಿಗಳಿಗೆ ಸಲಹೆ ನೀಡಿದರು. ಉಕ್ಕಡಗಾತ್ರಿ ಭವ ರೋಗ ಪರಿಹರಿಸುವ ಕೇಂದ್ರವಾಗಿದ್ದು, ಜನರ ಭಾವನೆಗಳಿಗೆ ಪೂರಕವಾಗಿ ಅಜ್ಜಯ್ಯನ ಆಶೀರ್ವಾದ ಸಿಗಲಿದೆ ಎಂದು ಸ್ವಾಮೀಜಿ ಹೇಳಿದರು.

ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ರಾಜಗೋಪುರದ ಬುನಾದಿ ಕೆಲಸ ಪೂರ್ಣಗೊಂಡಿದ್ದು, ಮುಂದಿನ ಜಾತ್ರೆ ವೇಳೆಗೆ ರಾಜಗೋಪುರ ಸಿದ್ಧಗೊಳ್ಳುವ ವಿಶ್ವಾಸವಿದೆ. ಜೊತೆಗೆ 3 ಕೆಜಿ ತೂಕದ ಬಂಗಾರದ ಕಿರೀಟವನ್ನು ಅಜ್ಜಯ್ಯನಿಗೆ ಮಾಡಿಸುವ ಗುರಿ ಇದೆ ಎಂದು ತಿಳಿಸಿದರು.

ಜಾತ್ರೆ ವೇಳೆ ಭಕ್ತರು ದೇವರ ಫೋಟೋಗಳನ್ನು ಮತ್ತು ಬಟ್ಟೆಗಳನ್ನು ಎಲ್ಲೆಂದರಲ್ಲಿ ಹಾಕಬೇಡಿ ಕೇಳಿಕೊಂಡರು.

ಟ್ರಸ್ಟ್ ಕಮಿಟಿ ಸದಸ್ಯ ನಾಗರಾಜ್ ದಿಲ್ಲಿವಾಲ, ಗದ್ದಿಗೆಯ ಪಾಟೀಲ, ಪ್ರಕಾಶ್, ಕೊಟ್ರೇಶ್, ಕರಿಬಸಪ್ಪ ಹೋಟೋರಿ, ಈರನಗೌಡ, ಗದಿಗೆಪ್ಪ ಹೊಸಳ್ಳಿ, ಬಸವರಾಜ್, ಹನುಮನಗೌಡ, ಶಿವಪೂಜೆ, ಬಸವನಗೌಡ ಪಾಳೇದ್, ಸಿದ್ಧಲಿಂಗಪ್ಪ, ಮುಖಂಡರಾದ ಶಿವಣ್ಣ, ಮೈಸೂರಿನ ಮಂಜೇಗೌಡ ಹಾಗೂ ಗ್ರಾ.ಪಂ. ಸದಸ್ಯರು ವೇದಿಕೆಯಲ್ಲಿದ್ದರು.

ದೇವಸ್ಥಾನದ ಅರ್ಚಕರು ವೇದಘೋಷದ ಮೂಲಕ ಪ್ರಾರ್ಥಿಸಿದರು. ಶಿಕ್ಷಕ ಚಕ್ರಸಾಲಿ ಸ್ವಾಗತಿಸಿದರು. ಎಸ್.ಬಿ. ಹಿತ್ತಲಮನಿ ನಿರೂಪಿಸಿದರೆ, ವಿವೇಕಾನಂದ ವಂದಿಸಿದರು.

ಬೆಳಗ್ಗೆ ಅಜ್ಜಯ್ಯನ ಗದ್ದುಗೆಗೆ ವಿಶೇಷ ಪೂಜೆ ಅಲಂಕಾರ ಮಾಡಲಾಗಿತ್ತು. ಕ್ಷೇತ್ರದಲ್ಲಿ ವಿದ್ಯುತ್ ದೀಪಾಲಂಕಾರ ಮತ್ತು ಹೂವಿನ ಅಲಂಕಾರ ಗಮನ ಸೆಳೆಯಿತು. ಗುರುವಾರ ಬೆಳಗ್ಗೆ ಅಜ್ಜಯ್ಯನ ಅಭಿಷೇಕ ನಡೆಯಲಿದೆ.

## ನವೀನ್ ಕುಟುಂಬಕ್ಕೆ ಶಿವಣ್ಣನವರ್ ಸಾಂತ್ವನ



ರಾಣೇಬೆನ್ನೂರು, ಮಾ.2- ರಷ್ಯಾ - ಉಕ್ರೇನ್ ಸಂಘರ್ಷದಲ್ಲಿ ಬಲಿಯಾದ ತಾಲ್ಲೂಕಿನ ಚಳಗೇರಿಯ ವೈದ್ಯಕೀಯ ವಿದ್ಯಾರ್ಥಿ ನವೀನ್ ಅವರ ಮನೆಗೆ ಸಾಂತ್ವನ ಹೇಳಲು ಬಂದ ಮಾಜಿ ಸಚಿವ ಬಸವರಾಜ ಶಿವಣ್ಣನವರ್ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕೋಳಿವಾಡ ಅವರು ನವೀನ್ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿದರು.

## ಸರ್ಕಾರದ ಪ್ರಯತ್ನ ನಿರಂತರ

(1ನೇ ಪುಟದಿಂದ) ಸಹೋದರ ಹರ್ಷನಿಗೆ ಯೋಗ್ಯ ನೌಕರಿ ಕೊಡಿಸುವ ಮುಂತಾದವುಗಳ ಬಗ್ಗೆ ಮುಖ್ಯಮಂತ್ರಿಗಳು ಹಾಗೂ ಪ್ರಧಾನಿಗಳ ಜೊತೆ ಚರ್ಚಿಸು ವುದಾಗಿ ಸಚಿವ ಜೋಷಿ ವಿವರಿಸಿದರು.

ಶಾಸಕರಾದ ಅರುಣಕುಮಾರ ಪೂಜಾರ, ವಿರೂಪಾಕ್ಷಪ್ಪ ಬಳ್ಳಾರಿ, ಮಾಜಿ ಸಚಿವ ಕಾಂಗ್ರೆಸ್‌ನ ಬಸವರಾಜ ಶಿವಣ್ಣನವರ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಪ್ರಕಾಶ ಕೋಳಿವಾಡ, ಬಿಜೆಪಿ, ಕಾಂಗ್ರೆಸ್‌ನ ಜಿಲ್ಲೆಯ ವಿವಿಧ ಪದಾಧಿಕಾರಿಗಳು, ಜಿಲ್ಲಾಧಿಕಾರಿ ಶೆಟ್ಟೆಣ್ಣನವರ ಮತ್ತಿತರರು ನವೀನ್ ಪಾಲಕರಿಗೆ ಸಾಂತ್ವನ ಹೇಳಿದರು.

### ಬಡವರ ಮನೆಯಲ್ಲಿ ಪ್ರತಿಭೆಗಳು ಹುಟ್ಟಬಾರದು...

ಭಾರತದಲ್ಲಿ ಅದು ನಮ್ಮಂತಹ ಬಡವರ ಮನೆಯಲ್ಲಿ ಪ್ರತಿಭೆಗಳು ಹುಟ್ಟಬಾರದು. ಇಲ್ಲಿ ಕೇವಲ ಹಣಕ್ಕೆ ಬೆಲೆ ಇದೆ. ಪ್ರತಿಭಾವಂತರಿಗೆ ಬೆಲೆ ಇಲ್ಲ. ನಮ್ಮ ಮಗನಿಗೆ ಕೋಟಿಗಟ್ಟಲೆ ಹಣಕೊಟ್ಟು ಓದಿಸಲು ಸಾಧ್ಯವಾಗದಿದ್ದರಿಂದ ಅವನನ್ನು ಉಕ್ರೇನ್‌ಗೆ ಕಳಿಸಿದೆವು ಎಂದು ನವೀನ್ ತಾಯಿ ವಿಜಯಲಕ್ಷ್ಮಿ, ಸಚಿವ ಜೋಷಿ ಎದುರು ಕಣ್ಣೀರು ಸುರಿಸಿದರು.

ಭಾರತದಲ್ಲಿ ಬಡವರು ಓದಲು, ಬದುಕಲು ಬಿಡಿ. ಮಂತ್ರಿ ಮಹೋದಯರ ವಿದ್ಯಾಸಂಸ್ಥೆಗಳಿವೆ. ಅವುಗಳಲ್ಲಿ ಹಣವೇ ಪ್ರಧಾನವಾಗಿದೆ. ನೀವು ಪ್ರಧಾನಿಗಳ ಪಕ್ಕ ದಲ್ಲಿಯೇ ಇರುತ್ತೀರಿ. ಈ ವ್ಯವಸ್ಥೆ ಬದಲಾಯಿಸಿ ಎಂದು ಇನ್ನೊಬ್ಬ ವಿದ್ಯಾರ್ಥಿಯ ತಂದೆ ಸಚಿವರಿಗೆ ಹೇಳಿದರು.

## ಮೂವರು ತಾಯ್ನಾಡಿಗೆ ಪ್ರಯಾಣ

(1ನೇ ಪುಟದಿಂದ) ಜೊತೆ ಸಂಜಯ್ ಸಹ ಇದ್ದಾನೆ. ಇಬ್ಬರೂ ಸೇಫ್ ಆಗಿದ್ದೇವೆ ಎಂದು ಮಾಹಿತಿ ಕೊಟ್ಟಿದ್ದಾನೆ. ಇನ್ನು ಗಗನ್ ದೀಪ ಮಾತ್ರ ಮಂಗಳವಾರ ಮಧ್ಯಾಹ್ನ ಅವರ ತಾಯಿ ಶಿಕ್ಷಕಿ ಸುನಂದಮ್ಮ ಅವರಿಗೆ ಇನ್ನೂ ಖಾರ್ಕಿವ್ ಬಂಕರ್‌ನಲ್ಲಿದ್ದೇನೆ, ತೊಂದರೆ ಏನು ಇಲ್ಲ ಎಂದು ಮಾಹಿತಿ ನೀಡಿದ್ದಾನೆ.

## ನವೀನ್ ಕಳೇಬರ ತಾಯ್ನಾಡಿಗೆ ತರುವುದು ಪ್ರಥಮ ಆದ್ಯತೆ

(1ನೇ ಪುಟದಿಂದ) ಸಚಿವರೊಂದಿಗೆ ಹಾಗೂ ಯುಕ್ರೇನಿನಲ್ಲಿರುವ ಭಾರತೀಯ ರಾಯಭಾರಿ ಕಚೇರಿಗೂ ಮಾತನಾಡಿ ನವೀನ್ ಪಾರ್ಥಿವ ಶರೀರವನ್ನು ಪಡೆಯಲು ಗಂಭೀರ ಪ್ರಯತ್ನ ಮಾಡಲಾಗುವುದು ಎಂದರು. ಭಾರತ ಸರ್ಕಾರ ಉಕ್ರೇನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ತೆರವು ಮಾಡಲು ತೀವ್ರ ಪ್ರಯತ್ನ ಮಾಡುತ್ತಿದೆ. ಸುಮಾರು 26 ವಿಮಾನಗಳು ಮುಂದಿನ 2-3 ದಿನಗಳಲ್ಲಿ ಕರೆತರುತ್ತಿದ್ದು, ಈ ಪೈಕಿ ಕನ್ನಡಿಗರನ್ನು ಕರೆತರಲು ಗರಿಷ್ಠ ಪ್ರಯತ್ನ ಮಾಡಲಾಗುವುದು.

ಬೇರೆ ಬೇರೆ ನಗರಗಳಲ್ಲಿ ಇರುವವರನ್ನು ಬೇರೆ ಬೇರೆ ದಿಕ್ಕಿನಲ್ಲಿ ಬರಲು ತಿಳಿಸಲಾಗಿದೆ. ಯುದ್ಧ ನಡೆಯುತ್ತಿರುವುದರಿಂದ ಸ್ವಲ್ಪ ಕಷ್ಟವಾಗಿದೆ. ಭಾರತ ಸರ್ಕಾರ ಯುಕ್ರೇನ್ ಸರ್ಕಾರದೊಂದಿಗೆ ಮಾತನಾಡಿ ಸುರಕ್ಷಿತ ವಲಯಗಳಿಗೆ ಹೇಗೆ ಹೋಗಬೇಕೆನ್ನುವುದನ್ನು ಯೋಜಿಸಿ ಗುಂಪಿನಲ್ಲಿ ತೆರಳಲು ನಿರ್ದೇಶನ ನೀಡಿದೆ. ಹತ್ತಿರದ ರೈಲ್ವೆ ನಿಲ್ದಾಣದಲ್ಲಿ ಪಶ್ಚಿಮ ದಿಕ್ಕಿನತ್ತ ಬರಲು ಯೋಜಿಸಿದೆ. ಯುದ್ಧ ಭೂಮಿಯಿಂದ ಕನ್ನಡಿಗರನ್ನು ಹೊರತರುವ ಪ್ರಯತ್ನ ನಡೆದಿದೆ.

ನವೀನ್ ಜೊತೆಗಿದ್ದ ಗಾಯಾಳು ವಿದ್ಯಾರ್ಥಿಯ ಸ್ಥಿತಿಗತಿಯ ಬಗ್ಗೆ ವಿಚಾರಣೆ ನಡೆದಿದೆ ಎಂದರು.

### ಇಂದು ಶ್ರವಣ ಮೌಲ್ಯಮಾಪನ ಶಿಬಿರ

ವಿಶ್ವ ಶ್ರವಣ ದಿನಾಚರಣೆ ಅಂಗವಾಗಿ ಕ್ವೆಸ್ಟ್ ಸ್ಪೀಚ್ ಮತ್ತು ಹೀಯರಿಂಗ್ ಕೇಂದ್ರವು ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರ ವರೆಗೆ ಉಚಿತ ಶ್ರವಣ ಮೌಲ್ಯಮಾಪನ ಶಿಬಿರ ನಡೆಯಲಿದೆ. ವಿವರಕ್ಕೆ ಕ್ವೆಸ್ಟ್ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರ್, ಪಿ.ಜೆ. ಬಡಾವಣೆ, ಮೊಬೈಲ್: 9743780492, 9535510912 ರಲ್ಲಿ ಸಂಪರ್ಕಿಸಬಹುದು.

**WANTED**
Boys and Girls required for billing work at Food Mart Supermarket.
Quli: Any Degree
98864 63531

**ಮನೆ ಬಾಡಿಗೆಗೆ, ಲೀಸ್‌ಗೆ**
ಬಾಪೂಜಿ ಸ್ಕೂಲ್ ಹತ್ತಿರ 2 BHK (ಮಹಡಿ ಮನೆ) 16 ಲಕ್ಷಕ್ಕೆ. ನಿಜಲಿಂಗಪ್ಪ 15 ಲಕ್ಷಕ್ಕೆ 3 BHK (ಕೆಳಗಿನ ಮನೆ). ಇಂಡಿಪೆಂಡೆಂಟ್ ಮನೆ 2 BHK ಬಸವೇಶ್ವರ ಲೇಔಟ್. ವಾಜಪೇಯಿ ಲೇಔಟ್ ಇಂಡಿಪೆಂಡೆಂಟ್ 2 BHK.
**ಕಿರಣ್ ಬೂಸ್ನೂರ್ : 98440-63409**
ಮನೆ ಬಾಡಿಗೆಗೆ, ಲೀಸ್‌ಗೆ ಬೇಕೇ ವಿಚಾರಿಸಿ (ಕಮೀಷನ್ ಆಧಾರದ ಮೇಲೆ)

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಪುರುಷ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

**ಮಾರಾಟಕ್ಕಿದೆ**
ಕಬ್ಬಿಣದ ಮಂಚ 14 ಗೇಜ್ ದಪ್ಪ, ಉದ್ದ-6 ಅಡಿ, ಅಗಲ 4'3' ಮಾರಾಟಕ್ಕಿದೆ (6x4x3)
99641 64895

**ಬೇಕಾಗಿದ್ದಾರೆ**
ನಗರದ ಪ್ಯಾಕೇಜ್ಡ್ ಡ್ರಿಂಕಿಂಗ್ ವಾಟರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು SSLC/PUC ಫೇಲಾದ ಯುವಕರು ಬೇಕಾಗಿದ್ದಾರೆ.
**ಪ್ರತೀಕ್ ಎಂಟರ್ ಪ್ರೈಸಸ್**
ನಾಗನೂರು- ಶಾಮನೂರು ರಸ್ತೆ, ಶಾಮನೂರು, ದಾವಣಗೆರೆ.
ಮೊ : 94481 10287

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ ಬೇಕಾಗಿದ್ದಾರೆ. ಸಂಬಳ 9000 ರೂ. ಊಟ, ರೂಂ ಉಚಿತ.
97400 98064
97400 98047

**WANTED**
Accoutants assistant - 01 post B.Com graduate with tally Knowledge 2-3 years Experience Appreciable Sales Executive - 01 Post Any Graduate with Electrical knowledge 2-3 years Experience appreciable. **Cotmac Industrial Trading Pvt Ltd.,** Near Gandhi Circle, P.B. Road, Davanagere.
98800 19842, 98800 19811

**ಕುರಿ / ಟಗರುಗಳು ಮಾರಾಟಕ್ಕಿವೆ**
ಹರಪನಹಳ್ಳಿ ರೋಡ್, ಬಿ. ಚಿತ್ತಾನಹಳ್ಳಿಯಲ್ಲಿರುವ ನಮ್ಮ ಫಾರಂ ಹೌಸಿನ ತೋಟದ ಮನೆಯಲ್ಲಿ ಉತ್ತಮವಾದ ಕುರಿ / ಟಗರುಗಳು ಮಾರಾಟಕ್ಕೆ ದೊರೆಯುತ್ತವೆ.
87627 47245
80952 14840

**WANTED**
Marketing Executive for Paint Industry
Location : Davangere
Qualification : MBA
Contact 94481 50174 or Send your Resume to Mail ID :
vinayakaindustries300@gmail.com

**Required**
Boys / Ladies hostel warden, Telecalling only for ladies (experience in institution), reception also.
Location:- Davangere
87628 67557

**ಮಷಿನ್‌ಗಳು ಬೇಕಾಗಿವೆ**
ಸೆಕೆಂಡ್ ಹ್ಯಾಂಡ್ ರಾಗಿ ಕ್ಲೀನಿಂಗ್ ಮತ್ತು ಹಿಟ್ಟಿನ ಗಿರಣಿ ಮಸಾಲಾ ಮಷಿನ್, ಮೋಟರ್ ಬೋರ್ಡ್ ಬೇಕಾಗಿದೆ.
88611 62024

**ಬೇಕಾಗಿದ್ದಾರೆ**
1) ಸೆಕ್ಯೂರಿಟಿ ಸೂಪರ್‌ವೈಸರ್
2) ಸೆಕ್ಯೂರಿಟಿ ಗಾರ್ಡ್ಸ್.
ಸಂಪರ್ಕಿಸಿ.
ಎಸ್.ಟಿ. ಸೋಮಶೇಖರ್
98803 37686

**ತಿದ್ದುಪಡಿ**
ದಿನಾಂಕ 1.3.2022 ರಂದು ಪ್ರಕಟವಾದ ಮಹೇಶ್ ನೆಲ್ಲಿಕೊಪ್ಪ ಬಿನ್ ಶಿವಲಿಂಗಪ್ಪ ಹೆಸರಿನ 'ಸಾರ್ವಜನಿಕ' ಪ್ರಕಟಣೆ' ಜಾಹೀರಾತಿನಲ್ಲಿ ಸೈಟ್ ನಂ.40 ಎನ್ನುವುದರ ಬದಲಾಗಿ ಕೈತಪ್ಪಿನಿಂದ ಸೈಟ್ ನಂ. 44 ಎಂದು ಪ್ರಕಟವಾಗಿದೆ. ಅದನ್ನು ಸೈಟ್ ನಂ. 40 ಎಂದು ಓದಿಕೊಳ್ಳಬೇಕಾಗಿ ವಿನಂತಿ.

**ಶ್ರೀ ಮುರುಘನ್ ಬೋರ್‌ವೆಲ್ಸ್**
ನಮ್ಮಲ್ಲಿ ಸೂಪರ್ ಫಾಸ್ಟ್ 4.5' ಇಂಚು ಬೋರ್‌ವೆಲ್ ಕೊರೆಯಲಾಗುವುದು. ಮನೆಯ ಒಳಗಡೆ ಮತ್ತು ಹೊರಗಡೆ 300-450 ಅಡಿಯವರೆಗೆ ಕೊರೆಯಲಾಗುವುದು.
99640 78484, 95906 15776

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
**ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್**
95135 03000

**House for Lease**
A Modern spacious 2BHK house in 1st Floor, with car parking facility opp to Davan's College, M.C.C 'B' Block, Davanagere.
86183 97950, 96636 95275

**ಬೇಕಾಗಿದ್ದಾರೆ**
ಟೈಲ್ಸ್ ಶೋ ರೂಂನಲ್ಲಿ ಕೆಲಸ ಮಾಡಲು ಸೇಲ್ಸ್‌ಮೆನ್ ಬೇಕಾಗಿದ್ದಾರೆ. ಅನುಭವ ಇರುವವರಿಗೆ ಮಾತ್ರ ಆದ್ಯತೆ ನೀಡಲಾಗುವುದು. ಸಂಪರ್ಕಿಸಿ : ಸಮ್ಯಕ್ ಸೆರಾಮಿಕ್ಸ್, ಟೈಲ್ಸ್ ಸ್ಟೋನ್, ಉದಯ ಸೂಪರ್ ಮಾರ್ಕೆಟ್ ಹತ್ತಿರ, ಹದಡಿ ರಸ್ತೆ, ದಾವಣಗೆರೆ.
96200 95520

**ಬೇಕಾಗಿದ್ದಾರೆ**
ಸೇಲ್ಸ್ ಮನ್, ಡಿಲೆವರಿ ಬಾಯ್ಸ್ ಹಾಗೂ ಟಾಟಾ ಏಸ್ ಓಡಿಸಲು ಲೈಸನ್ಸ್ ಹಾಗೂ ಅನುಭವವುಳ್ಳ ಡ್ರೈವರ್. ಸಂಪರ್ಕಿಸಿ :
**ಮಣಿಕಂಠ ಏಜೆನ್ಸೀಸ್**
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
9448233326, 7899135660

**Electric Vehicle Dealer**
Looking for Okaya electric Vehicle Dealer with Service center for Harihara, Channagiri, Honnali, Mayakonda, Davanagere old City.
88847 48227, 70191 61717

**ತಕ್ಷಣ ಬೇಕಾಗಿದ್ದಾರೆ**
ಕೊರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವುಳ್ಳ, ಇಂಗ್ಲಿಷ್ ಓದಲು, ಬರೆಯಲು ಬರುವಂತಹ ಹುಡುಗಿಯರು ಹಾಗೂ ಕೊರಿಯರ್ ಪಾರ್ಸೆಲ್ ಡೆಲಿವರಿ ಮಾಡಲು ಹುಡುಗರು ಬೇಕಾಗಿದ್ದಾರೆ. ದ್ವಿಚಕ್ರ ವಾಹನ (Two Wheeler Bike) ಇರಬೇಕು. ಪೆಟ್ರೋಲ್ ಭತ್ಯೆ ಕೊಡಲಾಗುವುದು. ಸಂಪರ್ಕಿಸಿ
89711 19130, 98800 42597
Whatsaap No. 70199 83025

**WANTED**
Male Candidate Required For Leading FMCG Company to do order & Collection. Experiened Prefered
Interview Timings 3PM to 5PM
**Swad Hypermart**
4th Main P.J. Extenstion, DVG
**72597 71185**
Salary - 8-10 thounsand

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು Rheumatologist (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 02.03.2022ರ ಬುಧವಾರ ಮತ್ತು 03.03.2022ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಜಮೀನು ಬೇಕಾಗಿದೆ**
ಹಳೇಬಾತಿಯಿಂದ ಶಿವನಹಳ್ಳಿ, ಷಂಷೀಪುರವರೆಗೆ (ಮೇನ್ ರೋಡ್), 20ಗುಂಟೆ, 30 ಗುಂಟೆ ಅಥವಾ 1 ಎಕರೆ ಜಮೀನು ಬೇಕಾಗಿದೆ. ಜಮೀನು ಇರುವವರು ನೇರವಾಗಿ ಸಂಪರ್ಕಿಸಿ. (ಸ್ವಂತಕ್ಕೆ ಬೇಕಾಗಿದೆ.)
89704 11100
98801 00102

**ಬೇಕಾಗಿದ್ದಾರೆ**
ಫರ್ನೀಚರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯೋಮಿತಿ : 21 ರಿಂದ 28. ಸ್ಥಳ : ದಾವಣಗೆರೆ.
86182 60719

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಬಾಡಿಗೆಗೆ ಇದೆ**
ರೂಂ. ಬಾಡಿಗೆಗೆ ಇದೆ. ಚಾಮರಾಜಪೇಟೆ, ದಾವಣಗೆರೆ.
82177 72482

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ 'A' ಬ್ಲಾಕ್‌ನಲ್ಲಿ 15X50 ಪೂರ್ವ ಸೈಟ್, ಪೂರ್ವ ಬಾಗಿಲು ಮೊದಲನೆ ಮಹಡಿಯಲ್ಲಿ ಶಾಮನೂರು ರಸ್ತೆ, ಕರ್ನಾಟಕ ಬ್ಯಾಂಕ್ ಹಿಂಭಾಗದಲ್ಲಿ.
**ನಾಗಭೂಷಣ**
9740723330

**ಶ್ರೀ ಸಾಯಿ**
ಮರದ ಗಾಣದ ಶುದ್ಧ ಎಣ್ಣೆ
ಮರದ ಗಾಣದ ಶುದ್ಧ ಎಣ್ಣೆ, ಕೊಬ್ಬರಿ ಎಣ್ಣೆ ದೊರೆಯುತ್ತದೆ. Sri Sai Oil Food Industries & Manufacturing #327, Beside Go Shala, Old P.B. Road, Avaragere, Davanagere.
63620 54750

**ಬೇಕಾಗಿದ್ದಾರೆ**
ಆಫೀಸ್ ನೋಡಿಕೊಳ್ಳಲು ಹುಡುಗಿಯರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನ ಕಡ್ಡಾಯ, E P OFFICE, ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂಸಿಸಿ 'ಎ' ಬ್ಲಾಕ್,
ಸಂದರ್ಶನ ಸಮಯ : 9 to 10 am
9844678457

**ತಕ್ಷಣವೇ ಬೇಕಾಗಿದ್ದಾರೆ**
ದಾವಣಗೆರೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್, ಸೂಪರ್‌ವೈಸರ್, ಫೀಲ್ಡ್ ಆಫೀಸರ್, ಮಾಜಿ ಸೈನಿಕರು & ಆಫೀಸ್‌ನಲ್ಲಿ ಕೆಲಸ, ಮಾಡಲು ನುರಿತ ಅಕೌಂಟೆಟ್ಸ್ ಬೇಕಾಗಿದ್ದಾರೆ.
96060 50591, 96060 50592
86603 98210

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC / PUC ಓದಿರುವ ಹಿಂದಿ ಭಾಷೆ ಬಲ್ಲ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ, ಆಕರ್ಷಕ ಸಂಬಳ ಕೊಡಲಾಗುವುದು.
94823 89317

**ಕುರಿಗಳು ಮಾರಾಟಕ್ಕಿವೆ**
ಶ್ರೀ -ಮಾರುತಿ ಕುರಿ ಸಾಕಾಣಿಕೆ ಕೇಂದ್ರ
ನಮ್ಮಲ್ಲಿ ಉತ್ತಮವಾಗಿ ಸಾಕಿದ ಆರೋಗ್ಯಕರ ನಾಟಿ ಟಗರುಗಳು ಸಿಗುತ್ತವೆ. ದಾವಣಗೆರೆಯಿಂದ ಕೇವಲ 4 ಕಿ.ಮೀ. ಐಗೂರು ರಸ್ತೆ.
ಸಂಪರ್ಕಿಸಿ 70196 02944
94807 46013

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
SSLC, PUC, Technical & Non Technical, Pharmacy & BHMS (Government & Private College)
ಕೆಲವೇ ಸೀಟುಗಳು ಲಭ್ಯ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ರಾಂ ಅಂಡ್ ಕೋ ಸರ್ಕಲ್, ಗಣೇಶ ದೇವಸ್ಥಾನದ ಹಿಂಭಾಗ, ಸೋಮು ಮೆಡಿಕಲ್ಸ್ ಮೇಲೆ, ದಾವಣಗೆರೆ.
87490 24789, 82173 02649

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female
Freshers/Experienced
98444 92888

**TO-LET**
Commercial Space 2400 sq.ft for Rent G+1 with 80 ft Road, facing near RTO Office on Kondajji Main Road, available in differnet size suitable for Bank / ATM / Supermarket /Showroom / Polyclinic / Office / Parlour / Gym / Studio / Yoga Center etc.
99864 52968

**ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಸಂಕೇಶ್ವರ ಇಂಡಸ್ಟ್ರೀಸ್ ಕರೂರು ಇಂಡಸ್ಟ್ರೀಯಲ್ ಏರಿಯಾ, ಭಾನುವಾರ ರಜೆ. ಒಂದು ಹೊತ್ತು ಊಟ. ಸಂಬಳ 9000 - 10,000/-.
77601 27896, 93808 71512


**ಪ್ರಥಮ ವರ್ಷದ ಪುಣ್ಯಸ್ಮರಣೆ**



**ಲಿಂ|| ಶರಣ ಹನಗವಾಡಿ ನಾರಪ್ಪನವರು**
(ಜನನ : 05.05.1940 ನಿಧನ : 14.03.2021)
ನಿವೃತ್ತ ಡೆಪ್ಯೂಟಿ ಲೀಡರ್, ಕಿರ್ಲೋಸ್ಕರ್, ಹರಿಹರ
ನೀವೂ ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮತ್ತು ನಿಮ್ಮ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ,
**ದುಃಖತಪ್ತ ಕುಟುಂಬ : ಶ್ರೀಮತಿ ಹನಗವಾಡಿ ಕಮಲಮ್ಮ ಮತ್ತು ಮಕ್ಕಳು, ದಾವಣಗೆರೆ. ಹನಗವಾಡಿ ವಂಶಸ್ಥರು, ಎಲೆಬೇತೂರು ಗ್ರಾಮಸ್ಥರು. ಮೊ. 99455-94176**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಗೌರಮ್ಮ ಶಾಸ್ತ್ರಿ (ಸಾವಿತ್ರಮ್ಮ) ನಿಧನ**




ದಾವಣಗೆರೆ ಲೆನಿನ್ ನಗರ ನಿಟ್ಟುವಳ್ಳಿ 60 ಅಡಿ ರಸ್ತೆ, 6ನೇ ಮೇನ್ ವಾಸಿ ಕೃಷ್ಣಪ್ಪ ಇವರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಶಾಸ್ತ್ರಿ (ಸಾವಿತ್ರಮ್ಮ) (51) ಅವರು ದಿನಾಂಕ 02.03.2022 ರ ಬುಧವಾರ ಬೆಳಿಗ್ಗೆ ನಿಧನರಾದರು. ಪತಿ, ಮೂವರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಭಗತ್ ಸಿಂಗ್ ನಗರದ ಆರ್.ಹೆಚ್. ಬೃಂದಾವನದಲ್ಲಿ ದಿನಾಂಕ 03.03.2022 ಗುರುವಾರ ಮಧ್ಯಾಹ್ನ 12 ಗಂಟೆಗೆ ನೆರವೇರಿಸಲಾಗುವುದು.

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 81339 33804

**ಎಸ್.ಎಸ್. ಫಿಲ್ಲಿಂಗ್ ಸ್ಟೇಷನ್**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ಲೋಕಿಕೆರೆ ಮೇನ್ ರೋಡ್ ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96200 94889
96865 51303

# 80ರ ಸಂಭ್ರಮದಲ್ಲಿ ಜೆ.ಸೋಮನಾಥ್



ಅನ್ಯಾಯ, ಅಕ್ರಮಗಳ ವಿರುದ್ಧ ಸದಾ ಹೋರಾಟದ ಬದುಕನ್ನು ರೂಢಿಸಿಕೊಂಡಿರುವ ; ಗುರು, ಲಿಂಗ, ಜಂಗಮ ದಾಸೋಹಿಗಳೂ, ದಾವಣ ಗೆರೆಯಲ್ಲಿ ಬಿಜೆಪಿಯನ್ನು ಹುಟ್ಟು ಹಾಕಿದವರಲ್ಲಿ ಪ್ರಮುಖರಲ್ಲೊಬ್ಬರೂ ಆಗಿರುವ ಜೆ. ಸೋಮನಾಥ್ ಅವರು ಇಂದು ಎಂಭತ್ತನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ.

ಷಡಾಕ್ಷರಯ್ಯ ಮತ್ತು ವೀರಮ್ಮ ದಂಪತಿಯ ಪುತ್ರರಾಗಿ 03-03-1943ರಂದು ಜನಿಸಿದ ಸೋಮಣ್ಣ, ಬಿಎಸ್ಸಿ ಪದವೀಧರರು. ವ್ಯಾಪಾರೋದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ವೃತ್ತಿ ಜೀವನ ಆರಂಭಿಸಿದ ಅವರು, ತಮ್ಮ ಬಾಳ ಸಂಗಾತಿಯನ್ನಾಗಿ ಶ್ರೀಮತಿ ಜೆ. ಶಾಂತಮ್ಮ ಅವರನ್ನು ಪಡೆದರು. ಕಾಲ ಕಳೆದಂತೆ ರಾಜಕೀಯ ಹಾಗೂ ಧಾರ್ಮಿಕ ಜೀವನಕ್ಕೂ ಪ್ರವೇಶ ಮಾಡಿದರು.

ಅನೇಕ ಸಂಘ - ಸಂಸ್ಥೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಾಮಾಜಿಕ ಸೇವೆ ಸಲ್ಲಿಸುತ್ತಿರುವ ಅವರು ಜೆ.ಸಿ. ಅಧ್ಯಕ್ಷರಾಗಿ, ಯೂತ್ಸ್ ಅಸೋಸಿಯೇಷನ್ ಸಂಸ್ಥಾಪಕ ಅಧ್ಯಕ್ಷರಾಗಿರುವ ಅವರು, ಶ್ರೀ ಶಿವಯೋಗೀಶ್ವರ ಭಜನಾ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ವಿವಿಎಫ್‌ಎಸ್ ಸದಸ್ಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದಾವಣಗೆರೆ ಯಲ್ಲಿ ಬಿಜೆಪಿ ಎಂದಾಕ್ಷಣ ಇಂದಿಗೂ ಸೋಮಣ್ಣ ಹೆಸರು ಮುಂಚೂಣಿಯಲ್ಲಿದೆ. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೇ ಮೂರು ದಶಕಗಳ ಕಾಲ ಗಣನೀಯ ಸೇವೆಯನ್ನು ಪಕ್ಷಕ್ಕಾಗಿ ಸಲ್ಲಿಸಿದ್ದಾರೆ.

ಅನೇಕ ಪ್ರತಿಭಟನೆಗಳ ಸಂದರ್ಭಗಳಲ್ಲಿ ಸೆರೆಮನೆಗೂ ಹೋಗಿ ಬಂದಿದ್ದಾರೆ. ಗೋಕಾಕ್ ವರದಿ ಜಾರಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಅವರು, ರಾಜ್ಯ ಬಿಜೆಪಿ ಪರಿಷತ್ ಸದಸ್ಯರಾಗಿ, ನಗರ ಬಿಜೆಪಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ನಗರಸಭೆಗೆ ನಾಲ್ಕು ಬಾರಿ, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿಗೆ ಮೂರು ಬಾರಿ ಸ್ಪರ್ಧೆ ಮಾಡಿದ್ದರು.

ತಮ್ಮ ಇಳಿವಯಸ್ಸಿನಲ್ಲೂ ನವ ಚೈತನ್ಯದಿಂದ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ಸೋಮಣ್ಣರ ಜೀವನಾನಂದದ ಗುಟ್ಟಾಗಿದೆ ಎಂದರೆ ತಪ್ಪಾಗಲಾರದು.

ನಮ್ಮ ಸುಖ-ದುಃಖಗಳಿಗೆಲ್ಲಾ ನಾವೇ ಜವಾಬ್ದಾರರೇ ವಿನಃ ಮತ್ತಾರೂ ಅಲ್ಲ. ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ ಎಂದು ತಮ್ಮ ಅನುಭವದ ಮಾತನ್ನು ಮೆಲುಕು ಹಾಕುತ್ತಾರೆ ಸೋಮಣ್ಣ.

- **ಧನುಷ್**, ಶಾಮನೂರು

# 12ರಂದು ಜಿಲ್ಲಾ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್

ದಾವಣಗೆರೆ, ಮಾ. 2 - ಇದೇ ದಿನಾಂಕ 12ರಂದು ಜಿಲ್ಲಾ ನ್ಯಾಯಾಲಯ ಹಾಗೂ ತಾಲ್ಲೂಕು ನ್ಯಾಯಾಲಯಗಳಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ರಾಜೀ ಸಂಧಾನ ನಡೆಸಲಾಗುವುದು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಆಯೋಜಿಸಲಾಗಿರುವ ಲೋಕ್ ಅದಾಲತ್‌ನಲ್ಲಿ ಜಿಲ್ಲೆಯ 7,948 ಪ್ರಕರಣಗಳನ್ನು ಬಗೆಹರಿಸಲು ಈಗಾಗಲೇ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಹೇಳಿದರು.

ದಿನಾಂಕ 12ರವರೆಗೂ ಕಕ್ಷಿದಾರರು ತಮ್ಮ ಪ್ರಕರ ಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ಅರ್ಜಿ ಸಲ್ಲಿಸಬಹುದು. ಜಿಲ್ಲೆಯಲ್ಲಿ ಒಟ್ಟು 36,824 ಪ್ರಕರಣಗಳು ಫೆ.28ರವರೆಗೆ ದಾಖಲಾಗಿವೆ. ಇವುಗಳ ಪೈಕಿ 33,021 ಪ್ರಕರಣ ಗಳು ಸಂಧಾನಕ್ಕೆ ಒಳಪಡಬಹುದಾದಂಥವು ಎಂದು ನ್ಯಾಯಮೂರ್ತಿ ಹೇಳಿದರು.

**8 ಸಾವಿರದಷ್ಟು ಪ್ರಕರಣಗಳು ಇತ್ಯರ್ಥಕ್ಕಾಗಿ ಈಗಾಗಲೇ ಆಯ್ಕೆ**

ಬಾಕಿ ಇರುವ ಪ್ರಕರಣಗಳ ಪೈಕಿ 14,472 ಪ್ರಕರಣಗಳನ್ನು ರಾಜೀ ಸಂಧಾನಕ್ಕೆ ಪರಿಗಣಿಸಲಾಗಿತ್ತು. ಈ ಪೈಕಿ 7,948 ಪ್ರಕರಣಗಳು ಇತ್ಯರ್ಥವಾಗುವ ನಿರೀಕ್ಷೆ ಇದೆ. ಇನ್ನಷ್ಟು ಪ್ರಕರಣಗಳು ಸಂಧಾನಕ್ಕೆ ಸೇರ್ಪಡೆಯಾಗುವ ನಿರೀಕ್ಷೆ ಇದೆ ಎಂದವರು ತಿಳಿಸಿದರು.

ಕಳೆದ ಬಾರಿ 2021ರ ಡಿಸೆಂಬರ್ 18 ರಂದು ಲೋಕ್ ಅದಾಲತ್ ನಡೆದಾಗ ಜಿಲ್ಲೆಯ 5,318 ಪ್ರಕರಣಗಳು ಇತ್ಯರ್ಥಗೊಂಡಿದ್ದವು. ಇವುಗಳ ಪರಿಹಾರ ಮೊತ್ತ 7.07 ಕೋಟಿ ರೂ. ಆಗಿತ್ತು ಎಂದು ನ್ಯಾಯಮೂರ್ತಿ ಹೇಳಿದರು.

ಲೋಕ್ ಅದಾಲತ್‌ನಲ್ಲಿ ಚಾಲ್ತಿಯಲ್ಲಿರುವ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಕಡಿಮೆ ಖರ್ಚಿನಲ್ಲಿ ಶೀಘ್ರವಾಗಿ ಬಗೆಹರಿಸಿಕೊಳ್ಳಬಹುದು. ರಾಜಿಯಾದಲ್ಲಿ ನ್ಯಾಯಾಲಯಗಳ ಶುಲ್ಕ ಮರು ಪಾವತಿ ಮಾಡಲಾಗುವುದು. ಕಕ್ಷಿದಾರರು ಭೌತಿಕವಾಗಿ ಇಲ್ಲವೇ ವಿಡಿಯೋ ಕಾನ್ಫರೆನ್ಸ್ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಪ್ರಕರಣ ಇತ್ಯರ್ಥಪಡಿಸಿಕೊಳ್ಳಬಹುದು ಎಂದವರು ತಿಳಿಸಿದರು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ದೂರವಾಣಿ ಸಂಖ್ಯೆ : 08192 - 296364, ತಾಲ್ಲೂಕು ಸೇವಾ ಸಮಿತಿಗಳಾದ ಹರಿಹರ : 08192 - 296885, ಹೊನ್ನಾಳಿ : 08188 - 251732, ಚನ್ನಗಿರಿ : 08189 - 229195 ಮತ್ತು ಜಗಳೂರು : 08196 - 227600 ಸಂಪರ್ಕಿಸಬಹುದು.

ಈ ಸಂದರ್ಭದಲ್ಲಿ ಮಾತನಾಡಿದ ಪಬ್ಲಿಕ್ ಪ್ರಾಸಿಕ್ಯೂಟರ್ ಎಸ್.ವಿ. ಪಾಟೀಲ್, ಕ್ರಿಮಿನಲ್ ಪ್ರಕರಣಗಳು ಹೆಚ್ಚು ರಾಜಿಯಾದಷ್ಟು ಕಕ್ಷಿದಾರರು ಹಾಗೂ ಸಂಬಂಧಿಸಿದವರಲ್ಲಿ ನೆಮ್ಮದಿ ಸಿಗುತ್ತದೆ. ವಿಶೇಷವಾಗಿ ಗ್ರಾಮೀಣ ಭಾಗದ ಪ್ರಕರಣಗಳು ಇತ್ಯರ್ಥವಾದಲ್ಲಿ ಹಳ್ಳಿಗಳಲ್ಲಿ ನೆಮ್ಮದಿ ಸಾಧ್ಯವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಮೂರ್ತಿ ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ಉಪಸ್ಥಿತರಿದ್ದರು.

> “ರಾಜಿಯಾಗಬಲ್ಲ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು, ಮೋಟಾರು ವಾಹನ ಅಪಘಾತ, ಚೆಕ್ ಅಮಾನ್ಯ, ಭೂಸ್ವಾಧೀನ ಪರಿಹಾರ, ಬ್ಯಾಂಕ್ ಸಾಲ ವಸೂಲಿ, ಎಂ.ಎಂ.ಡಿ.ಆರ್. ಪ್ರಕರಣ, ವಿಚ್ಛೇದನ ಹೊರತಾದ ವೈವಾಹಿಕ ಕುಟುಂಬ ನ್ಯಾಯಾಲಯದ ಪ್ರಕರಣಗಳು, ಪಿಂಚಣಿ, ವೇತನ - ಭತ್ಯೆ, ವಿದ್ಯುತ್ - ನೀರಿನ ಶುಲ್ಕ, ಕೈಗಾರಿಕೆ ಕಾರ್ಮಿಕರ ವೇತನ, ಕಾರ್ಮಿಕ ವಿವಾದ ಮತ್ತಿತರೆ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಬಹುದು.
>
> **- ರಾಜೇಶ್ವರಿ ಎನ್. ಹೆಗಡೆ,** ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಮೂರ್ತಿ

## ಶಿಬಾರದಲ್ಲಿ ಲಿಂ. ಜಗದ್ಗುರು ಗುರುಪಾದ ಮುರುಘರಾಜೇಂದ್ರ ಶ್ರೀ ರಥೋತ್ಸವ



ಚಿತ್ರದುರ್ಗ, ಮಾ.2- ನಗರಕ್ಕೆ ಸಮೀಪದ ಶಿಬಾರದಲ್ಲಿ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ವತಿಯಿಂದ ಶ್ರೀ ಜಗದ್ಗುರು ಗುರುಪಾದ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಹಾಗು ಶ್ರೀ ಮೈಲಾರ ಲಿಂಗೇಶ್ವರ ಸ್ವಾಮಿಯ 67ನೇ ವರ್ಷದ ರಥೋತ್ಸವ ಇಂದು ನಡೆಯಿತು.

ಡಾ. ಶಿವಮೂರ್ತಿ ಮುರುಘಾ ಶರಣರು, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಪ್ರಕಾಶ್, ಗ್ರಾ.ಪಂ. ಸದಸ್ಯರು, ಗುತ್ತಿನಾಡು, ಶಿಬಾರ ಇನ್ನಿತರೆ ಸುತ್ತಮುತ್ತಲಿನ ಗ್ರಾಮಸ್ಥರು ರಥೋತ್ಸವದಲ್ಲಿ ಭಾಗವಹಿಸಿದ್ದರು. ನಾಳೆ ದಿನಾಂಕ 3 ರಿಂದ ಇದೇ ದಿನಾಂಕ 17 ರವರೆಗೆ ಭಾರೀ ದನಗಳ ಜಾತ್ರೆ ನಡೆಯಲಿದ್ದು, ರಾಜ್ಯದ ವಿವಿಧ ಭಾಗಗಳಿಂದ ಹಾಗು ತಮಿಳು ನಾಡು, ಆಂಧ್ರಪ್ರದೇಶದಿಂದ ಹಳ್ಳಿಕಾರ್, ಅಮೃತಮಹಲ್, ಸಣ್ಣಮಲ್ಲಿಗೆ, ಗುಜುಮಾವು, ನಾಟಿ ಸೇರಿದಂತೆ ವಿವಿಧ ತಳಿಯ ರಾಸುಗಳು ಸೇರಲಿವೆ.

## ಜೆಡಿಎಸ್ ಸದಸ್ಯತ್ವ ನೋಂದಣಿ

**ನಗರದಲ್ಲಿ ಇಂದು**

ಜೆಡಿಎಸ್ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಪಕ್ಷದ ಸದಸ್ಯತ್ವ ನೋಂದಣಿ ಕಾರ್ಯಕ್ರಮ ಹಾಗೂ ಕಾರ್ಯಕರ್ತರ ಸಭೆಯು ಇಂದು ಸಂಜೆ 4.30 ಕ್ಕೆ ರೋಟರಿ ಬಾಲಭವನದಲ್ಲಿ ಜರುಗಲಿದೆ. ಕಾರ್ಯಕ್ರಮದಲ್ಲಿ ಎಚ್.ಎಸ್. ಶಿವಶಂಕರ್, ಬಿ. ಚಿದಾನಂದಪ್ಪ, ಗಣೇಶ ದಾಸಕರಿಯಪ್ಪ, ಅಮಾನುಲ್ಲಾ ಖಾನ್, ಟಿ. ಅಸ್ಗರ್ ಪಾಲ್ಗೊಳ್ಳಲಿದ್ದಾರೆ.

## ಮೇಕೆದಾಟು ಪಾದಯಾತ್ರೆಯಲ್ಲಿ ನಗರದ ಕಾಂಗ್ರೆಸ್ ಮುಖಂಡರು



ದಾವಣಗೆರೆ, ಮಾ. 2- ಮೇಕೆದಾಟು ಪಾದಯಾತ್ರೆಯಲ್ಲಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್ ಅವರುಗಳೊಂದಿಗೆ ಕೆಪಿಸಿಸಿ ವಕ್ತಾರ ಡಿ.ಬಸವರಾಜ್, ಮಹಾನಗರ ಪಾಲಿಕೆ ಸದಸ್ಯರಾದ ಗಡಿಗುಡಾಳ್ ಜಿ.ಎಸ್.ಮಂಜುನಾಥ್ ಗೌಡ್ರು, ಕೆ.ಚಮನ್ ಸಾಬ್, ಮುಖಂಡ ಟಿ.ವೈ.ಕುಮಾರ್ ಮತ್ತು ಇತರರು ಭಾಗವಹಿಸಿದ್ದರು.

## ನಡೆದುಕೊಂಡಾದರೂ ಖಾರ್ಕೀವ್ ತೊರೆಯಿರಿ

**(1ನೇ ಪುಟದಿಂದ)** ಪ್ರದೇಶಗಳಲ್ಲಿ ಸಿಲುಕಿರುವ ಭಾರತೀಯರಿಗೆ ಸಂಬಂಧಿಸಿದಂತೆ ನಾವು ಭಾರತದ ಅಧಿಕಾರಿಗಳ ಸಂಪರ್ಕದಲ್ಲಿದ್ದೇವೆ. ಆದಷ್ಟು ಶೀಘ್ರ ಮಾನವೀಯ ಕಾರಿಡಾರ್ ಸಾಧ್ಯವಾಗುವ ಆಶಾಭಾವನೆ ಇದೆ ಎಂದವರು ಹೇಳಿದ್ದಾರೆ.

ಈ ನಡುವೆ, ಉಕ್ರೇನ್‌ನಲ್ಲಿರುವ ಭಾರತೀಯರನ್ನು ತೆರವುಗೊಳಿಸುವ ಪ್ರಯತ್ನ ಚುರುಕುಗೊಳಿಸಲಾಗಿದೆ. ವಾಯುಪಡೆಯ ನಾಲ್ಕು ಸಿ-17 17 ಗ್ಲೋಬ್‌ಮಾಸ್ಟರ್ ವಿಮಾನಗಳು ಉಕ್ರೇನ್‌ನಿಂದ 800 ಭಾರತೀಯರನ್ನು ಕರೆ ತರುತ್ತಿವೆ ಎನ್ನಲಾಗಿದೆ.

ಉಕ್ರೇನ್ ಪೂರ್ವ ಭಾಗದಲ್ಲಿರುವ ಭಾರತೀಯರ ಬಗ್ಗೆ ಕಳವಳ ಇದೆ ಎಂದಿರುವ ಬಾಕ್ಚಿ, ಕೆಲ ವಿದ್ಯಾರ್ಥಿಗಳು ಖಾರ್ಕೀವ್ ನಗರದಿಂದ ರೈಲುಗಳಲ್ಲಿ ನಿನ್ನೆ ರಾತ್ರಿ ಹಾಗೂ ಬುಧವಾರ ಬೆಳಿಗ್ಗೆ ಹೊರಟಿದ್ದಾರೆ. ಖಾರ್ಕೀವ್ ಹಾಗೂ ಸುತ್ತಲಿನ ನಗರಗಳಿಂದ ಭಾರತೀಯರಿಗೆ ಸುರಕ್ಷಿತ ಮಾರ್ಗ ಕಲ್ಪಿಸುವಂತೆ ರಷ್ಯಾದವರಿಗೆ ಕೇಳಿದ್ದೇವೆ ಎಂದು ಹೇಳಿದ್ದಾರೆ.

ನಾವು ಸಲಹೆಗಳನ್ನು ನೀಡಿದ ನಂತರ ಸುಮಾರು 17 ಸಾವಿರ ಭಾರತೀಯರು ಉಕ್ರೇನ್ ಗಡಿಗಳನ್ನು ತೊರೆದಿದ್ದಾರೆ. ಇವರಲ್ಲಿ ಭಾರತೀಯ ರಾಯಭಾರಿ ಕಚೇರಿಯಲ್ಲಿ ನೋಂದಾಯಿಸದವರೂ ಸೇರಿದ್ದಾರೆ ಎಂದು ಬಾಗ್ಚಿ ತಿಳಿಸಿದ್ದಾರೆ. ಕಳೆದ ಫೆಬ್ರವರಿ 15ರಂದು ಸುಮಾರು 20 ಸಾವಿರ ಭಾರತೀಯರು ಉಕ್ರೇನ್‌ನಲ್ಲಿದ್ದಾರೆ ಎಂದು ಈ ಹಿಂದೆ ಅಂದಾಜಿಸಲಾಗಿತ್ತು.

## 31 ವಿಮಾನಗಳಲ್ಲಿ 6,300 ಜನರು ವಾಪಸ್

**(1ನೇ ಪುಟದಿಂದ)** ವಿಮಾನಗಳಲ್ಲಿ ಭಾರತೀಯರನ್ನು ರೊಮೇನಿಯಾದ ಬುಕಾರೆಸ್ಟ್‌ನಿಂದ ಕರೆ ತರಲಾಗುವುದು. ಎರಡು ವಿಮಾನಗಳು ಹಂಗೇರಿಯ ಬುಡಾಪೆಸ್ಟ್‌ನಿಂದ ಬರಲಿವೆ ಎಂದು ಮೂಲಗಳು ತಿಳಿಸಿವೆ. ಪೋಲ್ಯಾಂಡ್‌ನ ಜೆಸ್ಜೋನಿಂದ 4 ವಿಮಾನಗಳಲ್ಲಿ ವಿದ್ಯಾರ್ಥಿಗಳನ್ನು ವಾಪಸ್ ಕರೆ ತರಲಾಗುವುದು. ಸ್ಲೋವೇಕಿಯಾದ ಕೊಸೈಸ್‌ನಿಂದ ಒಂದು ವಿಮಾನ ಬರಲಿದೆ. ಬುಕಾರೆಸ್ಟ್‌ನಿಂದ ವಾಯುಪಡೆಯ ವಿಮಾನಗಳು ಕಾರ್ಯ ನಿರ್ವಹಿಸಲಿವೆ. ಮಾರ್ಚ್ 2ರಿಂದ ಮಾರ್ಚ್ 8ರವರೆಗೆ 31 ವಿಮಾನ ಹಾರಾಟಗಳು ನಡೆಯಲಿದ್ದು, 6,300ಕ್ಕೂ ಹೆಚ್ಚು ಜನರನ್ನು ವಾಪಸ್ ತರಲಿವೆ.

ಫೆಬ್ರವರಿ 26ರ ನಂತರ ಒಂಭತ್ತು ವಿಮಾನಗಳು ಭಾರತೀಯರನ್ನು ವಾಪಸ್ ಕರೆ ತಂದಿವೆ. 5-6 ವಿಮಾನಗಳು ವಾಪಸ್ಸಾಗುವ ಮಾರ್ಗದಲ್ಲಿವೆ ಎಂದು ಮೂಲಗಳು ತಿಳಿಸಿವೆ.

## ಮೇಕೆದಾಟು : ಬಜೆಟ್‌ನಲ್ಲಿ ಹಣ

**(1ನೇ ಪುಟದಿಂದ)** ಸಂಬಂಧಿಸಿ ದಂತೆ 2013 ರಲ್ಲಿ ಡಿಪಿಆರ್ ಸಿದ್ದಪಡಿಸಲು ಶುರುವಿಟ್ಟುಕೊಂಡ ಕಾಂಗ್ರೆಸ್ ಸರ್ಕಾರ ಅದನ್ನು ಕೇಂದ್ರ ಜಲ ಆಯೋಗಕ್ಕೆ ಸಲ್ಲಿಸಲು 2017 ರವರೆಗೆ ವಿಳಂಬ ಮಾಡಿತು. ಹೇಗೆ ವಿಳಂಬ ಮಾಡಿತು ಎಂಬುದರ ವಿವರ ಸರ್ಕಾರದ ಕಡತದಲ್ಲಿದೆ ಎಂದರು.

## ವಿದ್ಯಾಸಿರಿ ಯೋಜನೆಗೆ ಅರ್ಜಿ ಆಹ್ವಾನ

ದಾವಣಗೆರೆ, ಮಾ.2- ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳಿಂದ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ ಸೌಲಭ್ಯಕ್ಕಾಗಿ ಆನ್ ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

## ಧ್ಯಾನದ ಅಕ್ಷರ ರೂಪವೇ ಆರಾಧನೆಯ ಭಜನೆ : ಡಾ. ಎಂ.ಜಿ. ಈಶ್ವರಪ್ಪ



ದಾವಣಗೆರೆ, ಮಾ.2- ಆತ್ಮಶುದ್ಧಿಗಾಗಿ ದೇವರನ್ನು ಸ್ತುತಿಸುವ ಸಾಕ್ಷಿರೂಪವೇ ಭಜನಾ ಪರಂಪರೆ. ಭಜನಾ ಸಂಸ್ಕಾರ, ಸಂಸ್ಕೃತಿ, ಹುಟ್ಟು, ಸಾವಿನ ಎಲ್ಲಾ ಶುಭ, ಅಶುಭ ಸಂದರ್ಭಗಳಲ್ಲಿ ಸೂಕ್ತ ಭಕ್ತಿ ಪ್ರಧಾನ ಕಲಾಪರಂಪರೆ. ಧ್ಯಾನದ ಅಕ್ಷರ ರೂಪವೇ ಆರಾಧನೆಯ ಭಜನೆ. ಅದರಲ್ಲೂ ಗ್ರಾಮೀಣ ಪ್ರದೇಶದ ಭಜನಾ ಕಲಾವಿದರಿಗೆ ಯಾವುದೇ ಸಂಗೀತ ಕಲಿಕಾ ತರಬೇತಿಯ ಅಗತ್ಯವೇ ಇರುವುದಿಲ್ಲ. ಭಜನಾ ಕಲಾಸಕ್ತ ರೈತರಿಗೆ ಅವರ ಮನದಾಳದಿಂದಲೇ ರಕ್ತಗತವಾಗಿಯೇ ಈ ಭಜನಾ ಕಲೆ ಕರಗತವಾಗಿರುತ್ತದೆ. ಪ್ರಸ್ತುತ ದಿನಮಾನಗಳ ಯುವ ಪೀಳಿಗೆ ಇದನ್ನು ಅನುಸರಿಸಬೇಕಾಗಿದೆ ಎಂದು ಜನಪದ ತಜ್ಞ ಡಾ. ಎಂ.ಜಿ.ಈಶ್ವರಪ್ಪ ತಮ್ಮ ಮನದಾಳದ ಮಾತನ್ನು ಹೇಳಿದರು.

ನಗರದ ಬಾಡಾ ಕ್ರಾಸ್‌ನಲ್ಲಿರುವ ಶ್ರೀ ಪುಟ್ಟರಾಜ ನಗರದ ಶ್ರೀ ವೀರೇಶ್ವರ ಪುಣ್ಯಾಶ್ರಮದ ಶ್ರೀ ಗುರು ಕುಮಾರಸ್ವಾಮಿ ವೇದಿಕೆಯಲ್ಲಿ ನಿರಂತರವಾಗಿ ನಡೆಯುತ್ತಿರುವ 'ರಾಜ್ಯ ಮಟ್ಟದ ಕನ್ನಡ ಸಮೂಹ ಭಜನಾ ಸ್ಪರ್ಧೆ'ಯ 30ನೇ ದಿನದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶ್ರೀ ವೀರೇಶ್ವರ ಪುಣ್ಯಾಶ್ರಮದ ಗೌರವ ಕಾರ್ಯದರ್ಶಿ ಎ.ಹೆಚ್. ಶಿವಮೂರ್ತಿಸ್ವಾಮಿ, ಖಜಾಂಚಿ ಜೆ.ಎನ್.ಕರಿಬಸಪ್ಪ ಜಾಲಿಮರದ, ಸಂಘಟನಾ ಕಾರ್ಯದರ್ಶಿ ಎ.ಕೊಟ್ರಪ್ಪ ಕಿತ್ತೂರು, ಭಜನಾ ತೀರ್ಪುಗಾರರಾದ ಹಿರಿಯ ಸಂಗೀತ ಕಲಾವಿದ ಹನುಮಂತಪ್ಪ, ವಿದುಷಿ ಶ್ರೀಮತಿ ಮಂಗಳಗೌರಿ ಸಮಾರಂಭದ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಭಜನಾ ಸ್ಪರ್ಧೆ ಸಮಿತಿಯ ಕಾರ್ಯಾಧ್ಯಕ್ಷ ಸಾಲಿಗ್ರಾಮ ಗಣೇಶ್ ಶೆಣೈ ಸ್ವಾಗತಿಸಿದರು.

## ರಾಷ್ಟ್ರಮಟ್ಟಕ್ಕೆ ಕುಸ್ತಿ ಪಟುಗಳ ಆಯ್ಕೆ



ದಾವಣಗೆರೆ, ಮಾ.2- ಹರಿಯಾಣ ರಾಜ್ಯದ ಚಂಡಿಘಡದಲ್ಲಿ ಇದೇ ದಿನಾಂಕ 5 ರಿಂದ 8 ರವರೆಗೆ ಅಖಿಲ ಭಾರತ ನಾಗರಿಕ ಸೇವಾ ಕುಸ್ತಿ ಪಂದ್ಯಾವಳಿಯನ್ನು ಆಯೋಜಿಸಲಾಗಿದ್ದು, ಈ ಸ್ಪರ್ಧೆಗೆ ನಗರದ ದಾವಣಗೆರೆ ನ್ಯಾಯಾಂಗ ಇಲಾಖೆಯ ಭೂಲಕ್ಷ್ಮಿ 59 ಕೆ.ಜಿ. ವಿಭಾಗ, ಟಿ.ಬಿ. ಸುರೇಶ್ 76 ಕೆ.ಜಿ. ವಿಭಾಗ ಹಾಗೂ ಇ.ಎಸ್.ಐ. ಆಸ್ಪತ್ರೆಯ ಶುಶ್ರೂಷಕಿ ಪಿ.ಎಂ. ಕವಿತ 57 ಕೆ.ಜಿ. ವಿಭಾಗದ ಸ್ಪರ್ಧೆಗಳಲ್ಲಿ ಭಾಗವಹಿಸುವರು

ಇವರುಗಳು ಕ್ರೀಡೆಯಲ್ಲಿ ಯಶಸ್ಸು ಪಡೆಯಲಿ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಬಿ.ಪಾಲಾಕ್ಷಿ, ರಾಷ್ಟ್ರೀಯ ಕ್ರೀಡಾಪಟು-ವಾರ್ತಾ ಇಲಾಖೆಯ ಬಿ.ಎಸ್.ಬಸವರಾಜ್ ಶುಭ ಹಾರೈಸಿದ್ದಾರೆ.

## ಅಂತ್ಯ ಸಂಸ್ಕಾರಕ್ಕೆ ತೆರಳುತ್ತಿದ್ದ ಗೃಹಿಣಿಯ ಮಾಂಗಲ್ಯ ಸರ ಅಪಹರಣ

ದಾವಣಗೆರೆ, ಮಾ.2- ಅಂತ್ಯ ಸಂಸ್ಕಾರಕ್ಕೆ ತೆರಳುತ್ತಿದ್ದ ಗೃಹಿಣಿಯೋರ್ವರ 1 ಲಕ್ಷದ 25 ಸಾವಿರ ಮೌಲ್ಯದ ಮಾಂಗಲ್ಯ ಸರವನ್ನು ಅಪಹರಿಸಿರುವ ಘಟನೆ ಮಾಯಕೊಂಡ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಹನುಮನಹಳ್ಳಿ ಗ್ರಾಮದ ಗೃಹಿಣಿ ಲಲಿತಾ ಬಾಯಿ ಅವರು ಕಳೆದ ಫೆ. 28 ರಂದು ರಾತ್ರಿ 8.30ರ ಸಮಯದಲ್ಲಿ ತಮ್ಮ ಅಣ್ಣನ ಮಗನ ಮಗುವಿನ ಮರಣ ಕಾರಣ ಅಳಿಯನೊಂದಿಗೆ ತಾಯಿ ಸಮೇತ ಬೈಕ್ ನಲ್ಲಿ ತೆರಳುತ್ತಿದ್ದರು.

ಈ ವೇಳೆ ಜಂಪೇನಹಳ್ಳಿ ಗ್ರಾಮ ದಾಟಿ ಮುಂದೆ ಸುಲ್ತಾನಿಪುರ ಕ್ರಾಸ್ ಕಡೆ ಹೋಗುತ್ತಿರುವಾಗ ಬೈಕಿನಲ್ಲಿ ಪೆಟ್ರೋಲ್ ಖಾಲಿಯಾಗಿದ್ದು, ಅಳಿಯ ಬಸವರಾಜನು ಬೈಕಿನಿಂದ ಇಳಿಸಿ ಪೆಟ್ರೋಲ್ ಹಾಕಿಸಿಕೊಂಡು ಬರಲು ಕೊಡಗನೂರು ಕ್ರಾಸ್ ಕಡೆ ಹೋದನು. ಆಗ ಲಲಿತಾಬಾಯಿ ತನ್ನ ತಾಯಿಯೊಂದಿಗೆ ನಡೆದುಕೊಂಡು ಹೋಗುವಾಗ, ಹಿಂದಿನಿಂದ ಬೈಕಿನಲ್ಲಿ ಬಂದ ಅಪರಿಚಿತನು ಬೈಕಿನಲ್ಲಿ ಕರೆದುಕೊಂಡು ಹೋಗುವುದಾಗಿ ತಿಳಿಸಿ, ಬೈಕ್ ನಿಲ್ಲಿಸಿ ಈ ಇಬ್ಬರ ಹಿಂದೆ ಬಂದನು. ಆಗ ಲಲಿತಾಬಾಯಿ ತನ್ನ ತಾಯಿಗೆ ಲಂಬಾಣಿ ಭಾಷೆಯಲ್ಲಿ ಬೇಗ ಬಾ ಅಂತ ಕರೆದಿದ್ದನ್ನು ಕೇಳಿಸಿಕೊಂಡ ಅಪರಿಚಿತನು ತಾನೂ ಲಂಬಾಣಿ ಜನಾಂಗದ ಜಂಪೇನಹಳ್ಳಿ ಗ್ರಾಮದವನು ಎಂದು ಮಾತನಾಡುತ್ತಾ, ಹಿಂದಿನಿಂದ ಬಂದು ಲಲಿತಾಬಾಯಿ ಅವರ ಕೊರಳಿಗೆ ಕೈ ಹಾಕಿ 4 ತೊಲದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹಿಂದಕ್ಕೆ ಓಡಿ ತನ್ನ ಬೈಕಿನಲ್ಲಿ ಕಾಲ್ಕಿತ್ತಿದ್ದಾನೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಲಾಗಿದೆ.

## ಮೀಡಿಯಾ ಒನ್ ನಿಷೇಧಕ್ಕೆ ಹೈಕೋರ್ಟ್ ಅಸ್ತು

ಕೊಚ್ಚಿ, ಮಾ. 2 – ಮಲಯಾಳಂ ಸುದ್ದಿ ವಾಹಿನಿ ಮೀಡಿಯಾ ಒನ್‌ಗೆ ರಕ್ಷಣಾ ಅನುಮತಿ ನಿರಾಕರಿಸಿರುವ ಕೇಂದ್ರದ ನಿರ್ಧಾರವನ್ನು ಎತ್ತಿ ಹಿಡಿದಿರುವ ಕೇರಳ ಹೈಕೋರ್ಟ್, ಈ ವಾಹಿನಿಯಿಂದ ರಾಷ್ಟ್ರೀಯ ಭದ್ರತೆಯ ಮೇಲೆ ಪರಿಣಾಮವಾಗುವುದಾಗಿ ಗುಪ್ತಚರ ವರದಿಗಳಲ್ಲಿ ತಿಳಿಸಲಾಗಿದೆ ಎಂದು ಹೇಳಿದೆ. ರಕ್ಷಣಾ ಅನುಮತಿ ಇಲ್ಲದ ಕಾರಣ ವಾಹಿನಿಯನ್ನು ನಿಷೇಧಿಸಲಾಗಿತ್ತು. ಈ ನಿಷೇಧವನ್ನು ಏಕ ಸದಸ್ಯ ಪೀಠ ಎತ್ತಿ ಹಿಡಿದಿತ್ತು. ಅದನ್ನು ಪ್ರಶ್ನಿಸಿ ದಾಖಲಾದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎಸ್. ಮಣಿಕುಮಾರ ಹಾಗೂ ನ್ಯಾಯಮೂರ್ತಿ ಶಾಜಿ ಪಿ. ಚಲಿ ಅವರನ್ನು ಒಳಗೊಂಡ ಪೀಠ ತಳ್ಳಿ ಹಾಕಿದೆ.

ಗೃಹ ಸಚಿವಾಲಯ ದಾಖಲಿಸಿದ ಕಡತಗಳನ್ನು ಪರಿಶೀಲಿಸಿರುವ ನ್ಯಾಯಾಲಯ, ಅನಪೇಕ್ಷಿತ ಶಕ್ತಿಗಳ ಜೊತೆ ಸಂಪರ್ಕ ಇರುವ ಬಗ್ಗೆ ಗುಪ್ತಚರ ವರದಿಗಳು ತಿಳಿಸಿವೆ. ಇವು ರಕ್ಷಣಾ ಬೆದರಿಕೆಗೆ ಕಾರಣವಾಗಿವೆ ಎಂದು ಹೇಳಿದೆ. ಗುಪ್ತಚರ ಇಲಾಖೆ ಸಲ್ಲಿಸಿರುವ ಕಡತ ಗೌಪ್ಯ ಹಾಗೂ ಸಂವೇದನಾತ್ಮಕವಾಗಿದೆ. ರಾಷ್ಟ್ರೀಯ ಭದ್ರತೆ, ಸಾರ್ವಜನಿಕ ಸುವ್ಯವಸ್ಥೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ನಾವು ಮುಂದುವರೆದು ಹೇಳುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಮಾಧ್ಯಮಮ್ ಬ್ರಾಡ್‌ಕಾಸ್ಟಿಂಗ್ ಲಿಮಿಟೆಡ್ ಕಂಪನಿಯು ಮೀಡಿಯಾ ಒನ್ ನಡೆಸುತ್ತದೆ. ನಿಷೇಧ ಹೇರಿದ್ದನ್ನು ಪ್ರಶ್ನಿಸಿ ಮಾಧ್ಯಮಮ್ ಹಾಗೂ ಕೇರಳ ಕಾರ್ಯನಿರತ ಪತ್ರಕರ್ತರ ಒಕ್ಕೂಟ ಅರ್ಜಿ ದಾಖಲಿಸಿದ್ದವು.

# ನಗರದ ವಿವಿಧ ದೇಗುಲಗಳಲ್ಲಿ ಗಂಗಾಜಲ ಪ್ರೋಕ್ಷಣೆ



ದಾವಣಗೆರೆ, ಮಾ.2- ಹರಪನಹಳ್ಳಿ ತಾಲ್ಲೂಕಿನ ಕಂಚಿಕೆರೆ ಶ್ರೀ ಕ್ಷೇತ್ರ ಬಿದ್ದ ಹನುಮಪ್ಪನ ಮಟ್ಟಿ ಶ್ರೀ ವೀರಾಂಜನೇಯ ಮಹಾಸ್ವಾಮಿ ಟ್ರಸ್ಟ್ ನ ಶ್ರೀ ಬಸವರಾಜ ಗುರೂಜಿ ಅವರು ಮಹಾಮಾರಿ ಕೊರೊನಾ ತೊಲಗಲೆಂದು ಮತ್ತು ಲೋಕ ಕಲ್ಯಾಣಾರ್ಥವಾಗಿ ಹಿಮಾಲಯದಲ್ಲಿ 108 ದಿನಗಳ ಕಾಲ ತಪೋನುಷ್ಠಾನಗೈದು 9 ನದಿಗಳ ಜಲವನ್ನು ತಂದು ಶಿವರಾತ್ರಿ ದಿನದಂದು ನಗರದ ವಿವಿಧ ದೇವಾಲಯಗಳಿಗೆ ವಿತರಣೆ ಮಾಡಿದ್ದಾರೆ.

ದ್ವಾದಶ ಜ್ಯೋತಿರ್ಲಿಂಗಗಳಿಗೆ ಮತ್ತು ನವ ದೇವತೆಗಳಿಗೆ ಶ್ರೀ ಬಸವರಾಜ ಗುರೂಜಿಯವರು ಪವಿತ್ರ ಗಂಗಾಜಲ ಪ್ರೋಕ್ಷಣೆಯೊಂದಿಗೆ ಮಹಾಮಂಗಳಾರತಿ ಹಾಗೂ ವಿಶೇಷ ಪೂಜೆ ನೆರವೇರಿಸಿದ್ದಾರೆ.

ಶಿವರಾತ್ರಿ ದಿನದಂದು ಬೆಳಿಗ್ಗೆ ಶಾಮನೂರು ಕರಿಯಮ್ಮ, ವಿದ್ಯಾನಗರದ ಪಾರ್ವತಿ ದೇವಿ, ಜೆ. ಹೆಚ್. ಪಟೇಲ್ ಬಡಾವಣೆಯ ಹೇಮರೆಡ್ಡಿ ಮಲ್ಲಮ್ಮ, ಕುಂದುವಾಡದ ಕೆರೆ ಚೌಡೇಶ್ವರಿ, ದೇವರಾಜ ಅರಸು ಬಡಾವಣೆಯ ಅನ್ನಪೂರ್ಣೇಶ್ವರಿ, ರಿಂಗ್ ರಸ್ತೆಯ ಅನ್ನಪೂರ್ಣೇಶ್ವರಿ, ಯರಗುಂಟೆ ರಸ್ತೆಯ ಬನ್ನಿಮಹಾಂಕಾಳಿ, ವಿಜಯನಗರ ಬಡಾವಣೆಯ ಚೌಡೇಶ್ವರಿ ದೇವಿ, ರುದ್ರಭೂಮಿ ಚೌಡಮ್ಮ, ದುರ್ಗಾಂಬಿಕಾ ದೇವಿ, ನಿಟುವಳ್ಳಿ ಬನಶಂಕರಿ ದೇವಿ, ಕಾಳಿಕಾದೇವಿ, ಬೇತೂರು ರಸ್ತೆಯ ಮಾರಿ ಮುತ್ತು ದೇವಿ, ಭಾರತ ಕಾಲೋನಿಯ ದೊಡ್ಡಮ್ಮದೇವಿ, ನಿಟುವಳ್ಳಿ ದುರ್ಗಾಂಬಿಕ ದೇವಿ, ಭಗೀರಥ ಸರ್ಕಲ್ ಕರಿಯಮ್ಮ ದೇವಿ, ರಾಜೇಂದ್ರ ಬಡಾವಣೆಯ ಬನಶಂಕರಿ ದೇವಿ ದೇವಿ ದೇವಸ್ಥಾನಗಳಿಗೆ ತೆರಳಿ ಗಂಗಾಜಲ ಪ್ರೋಕ್ಷಣೆ ಮಾಡಲಾಯಿತು.

ರಾತ್ರಿ ನಗರದ ಈಶ್ವರ, ವರಾಹ ಭೀಮ ಶಂಕರಲಿಂಗ, ವಿದ್ಯಾನಗರದ ಈಶ್ವರ, ಪಾರ್ವತಿ ಗಣಪತಿ, ಶಾಮನೂರು ಲಿಂಗೇಶ್ವರ, ಪಾತಾಳಲಿಂಗೇಶ್ವರ, ಮೌನೇಶ್ವರ, ಮಲ್ಲಿಕಾರ್ಜುನ ಮತ್ತಿತರ ದೇವಸ್ಥಾನಗಳಲ್ಲಿ ಗಂಗಾಜಲ ವಿತರಣೆ ಮೂಲಕ ವಿಶೇಷ ಪೂಜೆ ಸಲ್ಲಿಸಲಾಯಿತು.

## ಬ್ಯಾಂಕ್ ಖಾತೆಗೆ ಪಾನ್ ಕಾರ್ಡ್ ಅಪ್ಡೇಟ್ ನೆಪ

**ಇಂಜಿನಿಯರ್ ಖಾತೆಯಲ್ಲಿದ್ದ ಹಣ ಮಾಯ**

ದಾವಣಗೆರೆ, ಮಾ.2- ಬ್ಯಾಂಕ್ ಖಾತೆಗೆ ಪಾನ್ ಕಾರ್ಡ್ ಅಪ್ ಡೇಟ್ ಮಾಡುವಂತೆ ಲಿಂಕ್ ಮೆಸೇಜ್ ಕಳುಹಿಸಿದ್ದನ್ನೇ ನಂಬಿದ ಇಂಜಿನಿಯರ್ ಅವರ ಬ್ಯಾಂಕ್ ಖಾತೆಯಲ್ಲಿದ್ದ 6 ಲಕ್ಷಕ್ಕೂ ಅಧಿಕ ಹಣವನ್ನು ಅಪರಿಚಿತರು ಆನ್ ಲೈನ್ ಮುಖೇನ ದೋಚಿ ವಂಚಿಸಿರುವ ಬಗ್ಗೆ ಇಲ್ಲಿನ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಜಯನಗರ ಬಿ ಬ್ಲಾಕ್ ನ ಸಿ. ರವಿಕುಮಾರ್ ವಂಚನೆಗೊಳಗಾದ ಇಂಜಿನಿಯರ್.

ನಿನ್ನೆ ತಮ್ಮ ಮೊಬೈಲ್‌ಗೆ ಅಪರಿಚಿತ ಮೊಬೈಲ್ ಸಂಖ್ಯೆಯಿಂದ ಬಂದ ಲಿಂಕ್ ನಲ್ಲಿದ್ದ ಸಂದೇಶದಂತೆ ತಮ್ಮ ಬ್ಯಾಂಕ್ ಖಾತೆಯ ಪೂರ್ಣ ಮಾಹಿತಿ ಮತ್ತು 6 ಬಾರಿ ಬಂದ ಒಟಿಪಿ ನಂಬರ್ ಗಳನ್ನು ನಮೂದಿಸಿದ್ದಾರೆ. ಇದಾದ ಕೆಲವೇ ಕ್ಷಣದಲ್ಲಿ ಖಾತೆಯಿಂದ 6 ಲಕ್ಷದ 27 ಸಾವಿರದ 797 ರೂ. ಹಣ ಕಡಿತವಾಗಿದೆ. ಇದೇ ವೇಳೆ ರವಿಕುಮಾರ್ ಅವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿದ ಅಪರಿಚಿತನು ತಾನು ಎಸ್‌ಬಿಐ ಬ್ಯಾಂಕ್ ರಿಕವರಿ ಶಾಖೆ ಮುಂಬೈನಿಂದ ಮಾತನಾಡುತ್ತಿರುವುದಾಗಿ ತಿಳಿಸಿ, ನಿಮ್ಮ ಖಾತೆಯಿಂದ ಕಡಿತವಾಗಿರುವ ಹಣವನ್ನು ರಿಕವರಿ ಮಾಡಿ ಕೊಡುತ್ತೇವೆ ಎಂದು ನಂಬಿಸಿದ್ದಾನೆ. ಈ ಬಗ್ಗೆ ಎಚ್ಚೆತ್ತ ಇಂಜಿನಿಯರ್, ಅಪರಿಚಿತರು ಬ್ಯಾಂಕ್ ಖಾತೆಗೆ ಪಾನ್ ಕಾರ್ಡ್ ಅಪ್ ಡೇಟ್ ಮಾಡುವಂತೆ ಲಿಂಕ್ ಮೆಸೇಜ್ ಕಳುಹಿಸಿ ಮತ್ತು ಎಸ್.ಬಿ.ಐ ಬ್ಯಾಂಕ್ ರಿಕವರಿ ಅಧಿಕಾರಿ ಸೋಗಿನಲ್ಲಿ ವಂಚಿಸುತ್ತಿರುವ ಬಗ್ಗೆ ಅನುಮಾನಗೊಂಡು ಪುನಃ ಅಪರಿಚಿತರ ಮಾತು ಕೇಳದೆ ಇದ್ದ ಕಾರಣ ಮತ್ತಷ್ಟು ಹಣ ಕಳೆದುಕೊಳ್ಳುವುದು ತಪ್ಪಿದೆ.

## ನಗರದಲ್ಲಿ ಇಂದು ಶರಣ ಸಂಗಮ

ಬಸವ ಕೇಂದ್ರ - ಶ್ರೀ ಮುರುಘರಾಜೇಂದ್ರ ವಿರಕ್ತಮಠ, ಶ್ರೀ ಜಗದ್ಗುರು ಮುರುಘರಾಜೇಂದ್ರ ಶಿವಯೋಗಾಶ್ರಮ ಟ್ರಸ್ಟ್ ವತಿಯಿಂದ ಇಂದು ಸಂಜೆ 6.30 ಕ್ಕೆ ಶಿವಯೋಗಾಶ್ರಮದ ಆವರಣದಲ್ಲಿ 'ಶರಣ ಸಂಗಮ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಡಾ. ಶಿವಮೂರ್ತಿ ಮುರುಘಾ ಶರಣರು ಅಧ್ಯಕ್ಷತೆ ವಹಿಸುವರು. ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖ ವಹಿಸಲಿದ್ದಾರೆ. ಮೇಯರ್ ಜಯಮ್ಮ ಗೋಪಿನಾಯ್ಕ, ಐಎನ್‌ಟಿಯುಸಿ ಮಹಿಳಾ ವಿಭಾಗದ ರಾಜ್ಯಾಧ್ಯಕ್ಷೆ ಸವಿತಾಬಾಯಿ ಮಲ್ಲೇಶನಾಯ್ಕ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಭರಮಸಾಗರ ಬಾಪೂಜಿ ಪ.ಪೂ. ಕಾಲೇಜಿನ ಉಪನ್ಯಾಸಕರಾದ ಡಾ. ಎನ್. ಮಮತಾ ಉಪನ್ಯಾಸ ನೀಡುವರು.


**ಉಚಿತ ತಪಸಾಣೆ ಮತ್ತು ಚಿಕಿತ್ಸಾ ಶಿಬಿರ**

**ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ**

3 ದಿನಗಳ ಕಾಲ ವಿಶಿಷ್ಟವಾದ ಉಚಿತ ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ.

♦ **ಉಚಿತ ಮೂಳೆ ಸಾಂದ್ರತೆ ಪರೀಕ್ಷೆ ಮತ್ತು ಎಲ್ಲಾ ತರಹದ ನೋವುಗಳ ಚಿಕಿತ್ಸಾ ಶಿಬಿರ**
ದಿನಾಂಕ 5.03.2022 ಸಮಯ ಬೆ 10 ರಿಂದ ಸಂಜೆ 4 ರ ತನಕ (ಝಂಡು ಫಾರ್ಮಸಿ ಪ್ರಸ್ತುತಿ)

♦ **ಉಚಿತ ಮಕ್ಕಳ ಮತ್ತು ಸ್ತ್ರೀ ಸಂಬಂಧಿತ (ಗರ್ಭಕೋಶ) ರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ**
(ದಿನಾಂಕ 06.03.2022 ಸಮಯ ಬೆ 10 ರಿಂದ ಸಂಜೆ 4 ರ ತನಕ)

**ಉಚಿತ ಉದರ (ಗ್ಯಾಸ್ಟ್ರಿಕ್ ಇತ್ಯಾದಿ) ರೋಗಗಳ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ**
ದಿನಾಂಕ 7.03.2022 ಸಮಯ ಬೆ 10 ರಿಂದ ಸಂಜೆ 4 ರ ತನಕ)

ಮೇಲೆ ತಿಳಿಸಿದ ಶಿಬಿರಗಳಿಗೆ ಮೊದಲೇ ಹೆಸರು ನೋಂದಾಯಿಸಿದ 100 ಜನರಿಗೆ ಮಾತ್ರ ಆಸಕ್ತರು ಇಂದೇ ಸಂಪರ್ಕಿಸಿ

ANVAYA

**ಅನ್ವಯ ಆಯುರ್ವೇದ ಆಸ್ಪತ್ರೆ**
#1981, 10ನೇ ಕ್ರಾಸ್, ಎಂ.ಸಿ.ಸಿ.'ಎ' ಬ್ಲಾಕ್, ಆಶ್ರಯ ಆಸ್ಪತ್ರೆ ಹಿಂಭಾಗ, ದಾವಣಗೆರೆ
ಫೋ: 08192 252228 ಮೊ: 86186 42929


**In the Court of the prl. Senior Civil Judge and CJM at Davangere**

**O.S. No. 07 of 2021**

Between : Karnataka Gramin Bank, Hebbalu Branch, Davangere Taluk-Plaintiff and : Sri. O.R. Kuberappa and Others.-Defendants
Defendant No. 2 : Sri. Lingaraja s/o O.R. Kuberappa R/o Obannanahalli Village, Naraganahalli Post, Davangere Taluk.

**SUMMONS UNDER ORDER 5 RULE 20 (1) (A) OF C.P.C.**

Whereas, the Plaintiff Karnataka Gramin Bank, Hebbalu Branch, Davangere Taluk Has instituted the suit against the defendants for the recovery a sum of Rs. 5,54,323/- and for court costs and such other reliefs. You, the defendant No. 2 is hereby summoned to appear in this court in person or by a pleader duly instructed and able to answer all your material questions relating to the said suit who shall be accompanied by some person able to answer all such questions, on the 10th day of march 2022 at Davangere in the forenoon 11 "clock to answer the claim and as the day fixed for your appearance is appointed for the final disposal of the suit.

Take notice that in default of your appearance on the day before mentioned, the suit will be heard and determined in your absence.

Given under my hand and seal of the court this 28th day of 2022

**M.B. Naveen Kumar, B.A.L., LL.M.,**
**Advocate for plaintiff**

**Davangere**
**Date : 28.02.2022**

**Sd/-**
**By the Order or the Court**
**Sd/- Chief Ministerial Officer,**
**Prl. Sr. Civil Judge & CJM Court**
**Davanagere.**

**IN THE COURT OF THE FIRST ADDITIONAL CIVIL JUDGE AT DAVANAGERE**

**O.S. 489 / 2021**

Plaintiff : Smt. Farahath Jabeen, - V/s -
Defendants : Sri Kalasappa and Others,
Proposed defendant No.4: Sri Parashuram Babu banokhande, S/o Babu Rao Banokhande, Aged about 45 years, Door no. 636, Near Saint Jude Church, 3rd Cross, 7th Main, HMT Layout, Ganga Nagara, RT Nagara, Bangalore North, BANGALORE 560032.

**NOTICE OF THE IMPLEADING APPLICATION TO THE PROPOSED DEFENDANT NO.4 BY SUBSTITUTED SERVICE BY MEANS OF PAPER PUBLICATION**

Whereas the plaintiffs have filed the above suit against the defendants 1 to 3 for declaration and consequentional relief of injuction in respect of the suit schedule property i.e. vacant site bearing No. 57, door No. 134/57 formed in Re.Sy.No. 134/2A of Davanagere situated in Kondajji Road, Davanagere City. As the defendants 1 to 3 sold the property to the above named proposed defendant No. 4, an application is filed to implead the above named proposed defendant No.4 as defendant no.4 in the above proceedings. the notice of the application sent to the proposed defendant no. 4 by RPAD returned without service with an endorsement not claimed. Hence, the application is filed for service by means of paper publication.

Hence, the proposed defendant No. 4 is hereby called upon to take notice that O.S 489/2021 on the file of the Hon'ble Principal Civil Judge and JMFC, Davanagere is posted to 06th day of April 2022 for your appearance at 11.00 A.M.

Hence, the proposed defendant No. 4 is called upon to take notice to appear in the above case on 06th day of April 2022 at 11.00 A.M. either personally or through an advocate failing which all further proceedings will take place in your absence.

Given under my hand and seal on 24th day of February 2022 at Davanagere.

Davanagere.
Date:24.02.2022

**By the order of Court**
**Chief Ministerial Officer,**
**Principal Civil Judge & JMFC Court Davanagere.**

# ರೈತ ಹುತಾತ್ಮರ ಭವನ ನಿರ್ಮಾಣಕ್ಕೆ ಕ್ಷೇತ್ರಾಭಿವೃದ್ಧಿ ಅನುದಾನಕ್ಕೆ ಮನವಿ



ದಾವಣಗೆರೆ, ಮಾ.2- ತಾಲ್ಲೂಕಿನ ಆನಗೋಡು ಸಮೀಪದಲ್ಲಿ ರೈತ ಹುತಾತ್ಮರ ಭವನ ನಿರ್ಮಾಣಕ್ಕೆ ತಮ್ಮ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ ಅನುದಾನ ನೀಡುವಂತೆ ರೈತ ಹುತಾತ್ಮರ ಸ್ಮರಣಾರ್ಥ ಸಮಿತಿ ವತಿಯಿಂದ ಸಂಸದ ಜಿ.ಎಂ. ಸಿದ್ದೇಶ್ವರ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಹಿಂದೆ 1992ನೇ ಸೆಪ್ಟೆಂಬರ್ 13ನೇ ತಾರೀಖು ಕೇಂದ್ರ ಸರ್ಕಾರ ಗೊಬ್ಬರ ಬೆಲೆ ಹೆಚ್ಚಳ ಮಾಡಿದ ಸಂದರ್ಭದಲ್ಲಿ ರೈತಪರ ಚಳುವಳಿಯಲ್ಲಿ ಭಾಗಿಯಾದ ಸಂದರ್ಭದಲ್ಲಿ ಪೊಲೀಸರ ಗುಂಡಿಗೆ ಬಲಿಯಾದ ನಿರಪರಾಧಿ ರೈತ ಮುಖಂಡರಾದ ಓಬೇನಹಳ್ಳಿಯ ಕಲ್ಲಿಂಗಪ್ಪ ಮತ್ತು ಸಿದ್ದನೂರು ಗ್ರಾಮದ ನಾಗರಾಜ್ ಚಾರ್ ಅವರುಗಳ ಸ್ಮರಣಾರ್ಥ ರೈತರ ಭವನ ನಿರ್ಮಾಣಕ್ಕೆ ತಮ್ಮ ಕ್ಷೇತ್ರಾಭಿವೃದ್ಧಿ ಅನುದಾನದಲ್ಲಿ 25 ಲಕ್ಷ ರೂ.ಗಳನ್ನು ಬಿಡುಗಡೆಗೊಳಿಸುವಂತೆ ಕೋರಿದರು.

ಆನಗೋಡು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಹುಳುಪಿನಕಟ್ಟೆ ಕ್ರಾಸ್ ರಾಷ್ಟ್ರೀಯ ಹೆದ್ದಾರಿ -4ರ ಬಳಿ ಪಾರ್ಕ್ ಪಕ್ಕದಲ್ಲಿ ಸರ್ವೆ ನಂ127 ರಲ್ಲಿ 37 ಗುಂಟೆ ಭೂಮಿ ಸರ್ಕಾರದಿಂದ ಮಂಜೂರಾಗಿರುವ ಸ್ಥಳದಲ್ಲಿ ರೈತ ಹುತಾತ್ಮರ ಭವನ ಈಗಾಗಲೇ ನಿರ್ಮಾಣ ಮಾಡುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಮಿತಿ ಅಧ್ಯಕ್ಷ ಎನ್.ಜಿ. ಪುಟ್ಟಸ್ವಾಮಿ, ಗೌರವಾಧ್ಯಕ್ಷ ಹೆಚ್. ನಂಜುಂಡಪ್ಪ, ರೈತರಾದ ಹೊನ್ನೂರು ಮುನಿಯಪ್ಪ, ಕಕ್ಕರಗೊಳ್ಳದ ಕಲ್ಲಿಂಗಪ್ಪ, ಶಾಮನೂರು ಲಿಂಗರಾಜ್, ಹೆಚ್.ಎನ್. ಶಿವಕುಮಾರ್, ಬಿ. ಗಂಗಾಧರ್, ಹೆಚ್.ಎಸ್. ಮುರುಗೇಂದ್ರಪ್ಪ, ಆವರಗೆರೆ ರುದ್ರಮುನಿ, ಎಸ್.ಟಿ. ಪರಮೇಶ್ವರಪ್ಪ ಸೇರಿದಂತೆ ಇತರರು ಇದ್ದರು.

# ಉಕ್ರೇನ್‌ನಲ್ಲಿ ವಿದ್ಯಾರ್ಥಿಯ ಸಾವು

ನವದೆಹಲಿ, ಮಾ. 2 – ಅನಾರೋಗ್ಯ ಪೀಡಿತವಾಗಿದ್ದ ಭಾರತದ ವೈದ್ಯಕೀಯ ವಿದ್ಯಾರ್ಥಿಯೊಬ್ಬರು ಉಕ್ರೇನ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

21 ವರ್ಷದ ಚಂದನ್ ಜಿಂದಾಲ್ ಅವರು ಉಕ್ರೇನ್‌ನ ವಿನಿಟ್ಸಿಯಾದಲ್ಲಿ ನಾಲ್ಕು ವರ್ಷಗಳಿಂದ ಅಧ್ಯಯನ ಮಾಡುತ್ತಿದ್ದರು. ಅವರು ಪಂಜಾಬ್‌ನ ಬರ್ನಾಲಾ ಮೂಲದವರು.

ಫೆಬ್ರವರಿ 2ರಂದು ಅವರು ಪಾರ್ಶ್ವವಾಯುಗೆ ಸಿಲುಕಿ ಐ.ಸಿ.ಯು.ಗೆ ದಾಖಲಾಗಿದ್ದರು. ಅವರ ಶಸ್ತ್ರಚಿಕಿತ್ಸೆಗೆ ಪೋಷಕರು ಅನುಮತಿ ನೀಡಿದ್ದರು. ಅವರ ಜೊತೆ ಇರಲು ಶಿಶನ್ ಕುಮಾರ್ ಹಾಗೂ ಕೃಷ್ಣ ಕುಮಾರ್ ಅವರು ಉಕ್ರೇನ್‌ಗೆ ತೆರಳಿದ್ದರು. ಸೋಮವಾರ ಕೃಷ್ಣ ಕುಮಾರ್ ಪಂಜಾಬ್‌ಗೆ ಮರಳಿದ್ದರು. ಅದರ ಬೆನ್ನಲ್ಲೇ ಚಂದನ್ ನಿಧನರಾದ ಸುದ್ದಿ ಬಂದಿದೆ.

ಈ ಬಗ್ಗೆ ಮಾತನಾಡಿರುವ ಕೃಷ್ಣ ಕುಮಾರ್, ಸಾಕಷ್ಟು ಕಷ್ಟದಿಂದ ರೊಮೇನಿಯಾ ಮೂಲಕ ವಾಪಸ್ಸಾಗಿದ್ದೆ. ಭಾರತದ ರಾಯಭಾರಿ ಕಚೇರಿ ಯಾವುದೇ ನೆರವು ನೀಡಿಲ್ಲ. ಸಾವಿರಾರು ವಿದ್ಯಾರ್ಥಿಗಳು ಗಡಿಯಲ್ಲಿ ಸಿಲುಕಿದ್ದಾರೆ, ರೊಮೇನಿಯಾದಲ್ಲಿ ಸೈನಿಕರು ಒರಟಾಗಿ ವರ್ತಿಸಿದ್ದರು ಎಂದಿದ್ದಾರೆ.

# ಮೃತ ನವೀನ್ ಕುಟುಂಬಕ್ಕೆ ಸಂಸದ ಜಿ.ಎಂ.ಸಿದ್ದೇಶ್ವರ ಸಾಂತ್ವನ



ದಾವಣಗೆರೆ, ಮಾ.2- ಯುಕ್ರೇನ್‌ನಲ್ಲಿ ನಡೆದ ಶೆಲ್ ದಾಳಿಯಲ್ಲಿ ಮೃತಪಟ್ಟ ರಾಣೇಬೆನ್ನೂರು ತಾಲ್ಲೂಕು ಚಳಗೇರಿ ಗ್ರಾಮದ ವಿದ್ಯಾರ್ಥಿ ನವೀನ್ ಶೇಖರಪ್ಪ ಗ್ಯಾನಗೌಡರ್ ಅವರ ನಿವಾಸಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಇಂದು ಭೇಟಿ ನೀಡಿ, ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ನವೀನ್ ಭಾವಚಿತ್ರಕ್ಕೆ ಸಂಸದರು ಪುಷ್ಪಾರ್ಚನೆಯೊಂದಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ.ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ನಿಕಟಪೂರ್ವ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್ ಹಾಗೂ ಇತರರು ಉಪಸ್ಥಿತರಿದ್ದರು.

# ಉಕ್ಕಡಗಾತ್ರಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಜಯಮ್ಮ



ಮಲೇಬೆನ್ನೂರು, ಮಾ.2- ಉಕ್ಕಡಗಾತ್ರಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿ ಗೋವಿನಹಾಳ್ ಗ್ರಾಮದ ಶ್ರೀಮತಿ ಜಯಮ್ಮ ಕೋಂ ಎ.ಪಿ.ರಂಗಪ್ಪ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಶ್ರೀಮತಿ ಸಾಕಮ್ಮ ದೇವೇಂದ್ರಪ್ಪ ಅವರ ರಾಜೀನಾಮೆಯಿಂದಾಗಿ ಉಪಾಧ್ಯಕ್ಷ ಸ್ಥಾನ ತೆರವಾಗಿತ್ತು.

ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ರಾಮಕೃಷ್ಣ ಅವರು ಚುನಾವಣಾಧಿಕಾರಿಯಾಗಿದ್ದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಕರಿಬಸಮ್ಮ, ಪಿಡಿಓ ರಾಮನಗೌಡ ಮತ್ತು ಇತರರು ಈ ವೇಳೆ ಹಾಜರಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಮ್.ಬಿ. ಕೇರಿ, ಹೊಂಡದ ಸರ್ಕಲ್, ಕಾಯಿಪೇಟೆ, ಜಾಲಿನಗರ, ಟೀಚರ್ಸ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲೂಎಸ್ ಕಾಲೋನಿ, ಹಳೇಪೇಟೆ, ಬಾರ್ ಲೈನ್ ರಸ್ತೆ ಹಾಗೂ ಸುತ್ತ ಮುತ್ತ ಇಂದು ಬೆಳಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


ದಾವಣಗೆರೆ ಮಹಾನಗರ ಪಾಲಿಕೆಯ
ಮಹಾತ್ಮಗಾಂಧಿ ವಿಕಾಸ ಯೋಜನೆಯಡಿ
ವಿವಿಧ ಕಾಮಗಾರಿಗಳ
ಭೂಮಿ ಪೂಜೆ ಸಮಾರಂಭ
ವಾರ್ಡ್ ನಂ.11





ವಾರ್ಡ್ ನಂ.11 ರ ವ್ಯಾಪ್ತಿಯಲ್ಲಿ ಬರುವ ನರಸರಾಜಪೇಟೆಯ ಅಜಾಂ ಮಸೀದಿ ರಸ್ತೆಯಲ್ಲಿ ಸಿ.ಸಿ.ಚರಂಡಿ, ಕವರಿಂಗ್ ಸ್ಲ್ಯಾಬ್ ಹಾಗೂ ಫೇವರ್ಸ್ ಅಳವಡಿಸುವ ಕಾಮಗಾರಿ ಮತ್ತು ಬಿ.ಡಿ.ಓ. ಕಛೇರಿ ಹಿಂಭಾಗದ ಅಡ್ಡ ರಸ್ತೆಗಳ ಸಿ.ಸಿ.ಚರಂಡಿ ಕವರಿಂಗ್ ಸ್ಲ್ಯಾಬ್ ಮತ್ತು ರಸ್ತೆಗಳಿಗೆ ಫೇವರ್ಸ್ ಅಳವಡಿಸುವ ಕಾಮಗಾರಿ, ಕೊರಮರ ಕಾಲೋನಿಯ ಇಮಾಂ ನಗರ 2 ನೇ ಕ್ರಾಸ್‌ನಲ್ಲಿ (ವೆಂಕಟೇಶ್ವರ ದೇವಸ್ಥಾನದ ರಸ್ತೆ) ಸಿ.ಸಿ.ಚರಂಡಿ ಡೆಕ್ ಸ್ಲ್ಯಾಬ್ ನಿರ್ಮಾಣ ಹಾಗೂ ಫೇವರ್ಸ್ ಕವರಿಂಗ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿ

ದಿನಾಂಕ: 03.03.2022.
ಸ್ಥಳ: ಅಜಾಂ ಮಸೀದಿ ಹತ್ತಿರ ನರಸರಾಜಪೇಟೆ
ಸಮಯ: ಮಧ್ಯಾಹ್ನ 12 ಗಂಟೆಗೆ
ಅಂದಾಜು ಮೊತ್ತ: 60 ಲಕ್ಷಗಳು



ಈ ಕಾಮಗಾರಿ ಭೂಮಿ ಪೂಜೆಗೆ ಆಗಮಿಸುತ್ತಿರುವ
ಡಾ|| ಶಾಮನೂರು ಶಿವಶಂಕರಪ್ಪ
ಅವರಿಗೂ,
ಮಹಾನಗರ ಪಾಲಿಕೆಯ ಎಲ್ಲಾ ಕಾಂಗ್ರೆಸ್ ಸದಸ್ಯರಿಗೂ, ಪಕ್ಷದ ಮುಖಂಡರಿಗೂ ಹಾಗೂ ಕಾರ್ಯಕರ್ತರಿಗೂ, ಅಭಿಮಾನಿಗಳಿಗೂ
ಸ್ವಾಗತ ಸುಸ್ವಾಗತ



ಸಯೀದ್ ಚಾರ್ಲಿ
ಮಹಾನಗರ ಪಾಲಿಕೆ ಸದಸ್ಯರು
11ನೇ ವಾರ್ಡ್

ಅಯೂಬ್ ಪೈಲ್ವಾನ್
ಕಾಂಗ್ರೆಸ್ ಮುಖಂಡರು
ದೂಡಾ ಮಾಜಿ ಅಧ್ಯಕ್ಷರು



ಅಖಿಲ ಭಾರತ ವೀರಶೈವ ಮಹಾಸಭಾ (ರಿ.)
ನಂ.17/4, 'ವೀರಶೈವ - ಲಿಂಗಾಯತ ಭವನ', ಸದಾಶಿವನಗರ, ಬೆಂಗಳೂರು - 560080.







ಅಖಿಲ ಭಾರತ ವೀರಶೈವ ಮಹಾಸಭಾ ದಾವಣಗೆರೆ ಜಿಲ್ಲಾ
"ವಾಣಿಜ್ಯ ಮತ್ತು ಕೈಗಾರಿಕಾ" ವಿಭಾಗದ
ಅಧ್ಯಕ್ಷರು, ಸಂಚಾಲಕರು ಹಾಗು ಸದಸ್ಯರನ್ನು ನೇಮಿಸಲು ಸಹಕರಿಸಿದ
ರಾಷ್ಟ್ರೀಯ ಅಧ್ಯಕ್ಷರಾದ ಡಾ|| ಶ್ರೀ ಶಾಮನೂರು ಶಿವಶಂಕರಪ್ಪನವರು
ವಾಣಿಜ್ಯ ಮತ್ತು ಕೈಗಾರಿಕಾ ವಿಭಾಗದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಉಮೇಶ್ ಎಂ. ಪಾಟೀಲ್
ಹಾಗೂ ದಾವಣಗೆರೆ ಜಿಲ್ಲಾ ವೀರಶೈವ ಮಹಾಸಭಾದ ಅಧ್ಯಕ್ಷರಾದ ಶ್ರೀ ದೇವರಮನೆ ಶಿವಕುಮಾರ್
ಅವರಿಗೆ ಹೃತ್ಪೂರ್ವಕ ಕೃತಜ್ಞತೆಗಳು....






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte